

# ಅಧ್ಯಾಯ–V
# ವಸ್ತು ಸಂಗ್ರಹಾಲಯಗಳ ಕಾರ್ಯನಿರ್ವಹಣೆ

## ಅಧ್ಯಾಯ V

### ವಸ್ತುಸಂಗ್ರಹಾಲಯಗಳ ಕಾರ್ಯನಿರ್ವಹಣೆ

*ವಸ್ತುಸಂಗ್ರಹಾಲಯಗಳು ಅಪಾರ ಐತಿಹಾಸಿಕ ಮೌಲ್ಯವನ್ನು ಹೊಂದಿರುವಂತಹ ಪ್ರಾಚೀನ ಹಸ್ತಕೃತಿಗಳು ಮತ್ತು ಪ್ರಾಚೀನಾವಶೇಷಗಳನ್ನು ಹೊಂದಿರುತ್ತವೆ. ಈ ಅಧ್ಯಾಯವು ಇಲಾಖೆಯಿಂದ ವಸ್ತು ಸಂಗ್ರಹಾಲಯಗಳ ನಿರ್ವಹಣೆಗೆ ಸಂಬಂಧಿತ ಅಂಶಗಳನ್ನು ಎತ್ತಿ ತೋರಿಸುತ್ತದೆ. ಇಲಾಖೆಯು ಪ್ರಾಚೀನ ಹಸ್ತಕೃತಿಗಳ ಪ್ರದರ್ಶನಕ್ಕಾಗಿ ಒಂದು ಆವರ್ತನೀಯ ಅಥವಾ ಕ್ರಮಾವರ್ತನೀಯ ಕಾರ್ಯನೀತಿಯನ್ನು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ವಸ್ತು ಸಂಗ್ರಹಾಲಯಗಳಲ್ಲಿ ಸಮರ್ಪಕವಾದಂತಹ ಸಂಗ್ರಹಣಾ ಅನುಕೂಲತೆಗಳು ಇರಲಿಲ್ಲ ಹಾಗೂ ಪ್ರಾಚೀನಾವಶೇಷಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು ಹಾಗೂ ಪ್ರಾಕೃತಿಕ ಬದಲಾವಣೆಗಳಿಗೆ ಗುರಿಯಾಗಿರುತ್ತದೆ. ಸಂಗ್ರಹಣೆಗಳ ಪಾಲನೆಯ ಪೂರ್ವಭಾವಿ ಯೋಜನೆಯು ಇರಲಿಲ್ಲ ಹಾಗೂ ಪ್ರಾಚೀನಾವಶೇಷಗಳ ಪಟ್ಟಿಯನ್ನು ಛಾಯಾಚಿತ್ರಗಳೊಂದಿಗೆ ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಿರಲಿಲ್ಲ. ವಸ್ತು ಸಂಗ್ರಹಾಲಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿರಲಿಲ್ಲ ಹಾಗೂ ಸಮರ್ಪಕವಾದಂತಹ ರೀತಿಯಲ್ಲಿ ಸಾರ್ವಜನಿಕ ಅನುಕೂಲತೆಗಳನ್ನು ಹೊಂದಿರಲಿಲ್ಲ ಎಂಬುದನ್ನು ಭೌತಿಕ ಪರೀಕ್ಷಣೆಯ ವೇಳೆಯಲ್ಲಿ ಗಮನಿಸಲಾಯಿತು.*

**5.1** ವಸ್ತುಸಂಗ್ರಹಾಲಯಗಳು ಮಾನವಕುಲದ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಅನುವಂಶಿಕ ಲಕ್ಷಣಗಳನ್ನು ಸಂರಕ್ಷಿಸುತ್ತವೆ, ಅರ್ಥೈಸುತ್ತವೆ, ಹಾಗೂ ಪ್ರೋತ್ಸಾಹಿಸುತ್ತವೆ ಹಾಗೂ ಸಮಾಜಕ್ಕೆ ಸಾಮೂಹಿಕ ಪ್ರಯೋಜನಗಳನ್ನು ಹೊಂದಿರುತ್ತದೆ. ಪುರಾತತ್ವ, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು 16 ವಸ್ತುಸಂಗ್ರಹಾಲಯಗಳು ಹಾಗೂ ಒಂದು ಕಲಾ ಗ್ಯಾಲರಿಯನ್ನು[45], ಹೊಂದಿದ್ದು, 15 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ ಹಾಗೂ ಅವುಗಳನ್ನು 1877 ಮತ್ತು 2014ರ ನಡುವೆ ಸ್ಥಾಪಿಸಲಾಗಿದ್ದಿತು.

ಫೆಬ್ರವರಿ 2012ರಲ್ಲಿ, ಕರ್ನಾಟಕ ಸರ್ಕಾರವು ಮೈಸೂರಿನಲ್ಲಿನ ಹೆಚ್ಚುವರಿ ನಿರ್ದೇಶಕರ ಹುದ್ದೆಯನ್ನು ನಿರ್ದೇಶಕರು (ವಸ್ತುಸಂಗ್ರಹಾಲಯಗಳು) ಬೆಂಗಳೂರು ಎಂದು ಮೇಲ್ದರ್ಜೆಗೇರಿಸಿತು. ಪುನರ್–ರಚನಾ ಆದೇಶದ ಅನುಸಾರ, ನಿರ್ದೇಶಕರ ಕಚೇರಿಗೆ ಈ ಕೆಳಗಿನ ಕಾರ್ಯಚಟುವಟಿಕೆಗಳನ್ನು ವಹಿಸಲಾಗಿದ್ದಿತು.

- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಸ್ತು ಸಂಗ್ರಹಾಲಯಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಅಭಿವೃದ್ಧಿಪಡಿಸುವುದು;

- ಪ್ರಾಚೀನಾವಶೇಷಗಳು ಮತ್ತು ಪ್ರಾಚೀನ ಹಸ್ತಕೃತಿಗಳ ವಿವರವಾದಂತಹ ಪಟ್ಟಿ ಮಾಡುವುದು; ಹಾಗೂ;

- ವಸ್ತು ಸಂಗ್ರಹಾಲಯಗಳಲ್ಲಿ ವಸ್ತುಪ್ರದರ್ಶನಗಳು/ಶೈಕ್ಷಣಿಕ ಕಾರ್ಯಕ್ರಮಗಳನ್ನು ವ್ಯವಸ್ಥೆ ಮಾಡುವುದನ್ನೂ ಒಳಗೊಂಡಂತೆ ವಸ್ತುಸಂಗ್ರಹಾಲಯಗಳು ಹಾಗೂ ಅವುಗಳ ಕಾರ್ಯಚಟುವಟಿಕೆಗಳನ್ನು ನಿಯತಕಾಲಿಕವಾಗಿ ಪರೀಕ್ಷಣೆ ಮಾಡುವುದು.

---

[45] ಬೆಂಗಳೂರಿನಲ್ಲಿರುವ ವೆಂಕಟಪ್ಪ ಕಲಾ ಗ್ಯಾಲರಿ.



**ಛಾಯಾಚಿತ್ರ ಸಂಖ್ಯೆ 5.1: ಬೆಂಗಳೂರಿನಲ್ಲಿ 1877ರಲ್ಲಿ ಸ್ಥಾಪಿಸಲಾಗಿರುವ ಹಾಗೂ ಒಂದು ಪಾರಂಪರಿಕ ಕಟ್ಟಡದಲ್ಲಿರುವಂತಹ ಸರ್ಕಾರಿ ವಸ್ತು ಸಂಗ್ರಹಾಲಯ.**

ಲೆಕ್ಕಪರಿಶೋಧನೆಯಲ್ಲಿ ಮಾಡಲಾದ ಮಾದರಿ ಆಯ್ಕೆಯ ಅನುಸಾರ, ಲೆಕ್ಕಪರಿಶೋಧನೆಯು ಆರು[46] ಜಿಲ್ಲೆಗಳಲ್ಲಿ ಎಂಟು[47] ವಸ್ತು ಸಂಗ್ರಹಾಲಯಗಳಿಗೆ (16ರ ಪೈಕಿ) ಹಾಗೂ ಕಲಾ ಗ್ಯಾಲರಿಗೆ ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಿತು ಹಾಗೂ ಈ ನಿಟ್ಟಿನಲ್ಲಿ ಗಮನಿಸಲಾದಂತಹ ಅಂಶಗಳನ್ನು ಈ ಕೆಳಗೆ ಚರ್ಚಿಸಲಾಗಿರುವುದು.

### *ಎಲ್ಲಾ ಜಿಲ್ಲೆಗಳಲ್ಲಿ ವಸ್ತು ಸಂಗ್ರಹಾಲಯಗಳ ಸ್ಥಾಪನೆಯಲ್ಲಿನ ವಿಳಂಬ*

**5.2** ಎಲ್ಲಾ ಜಿಲ್ಲೆಗಳಲ್ಲಿ ವಸ್ತು ಸಂಗ್ರಹಾಲಯಗಳ ಸ್ಥಾಪನೆಯ ಜವಾಬ್ದಾರಿಯನ್ನು ನಿರ್ದೇಶಕರಿಗೆ (ವಸ್ತುಸಂಗ್ರಹಾಲಯಗಳು) ವಹಿಸಲಾಗಿದ್ದಿತು (ಫೆಬ್ರವರಿ 2012). ಆ ದಾಗ್ಯೂ, ಇಲಾಖೆಯು ಈಗಾಗಲೇ 14 ಜಿಲ್ಲೆಗಳಲ್ಲಿ ಇದ್ದಂತಹ 15 ವಸ್ತು ಸಂಗ್ರಹಾಲಯಗಳ ಜೊತೆಗೆ ಕೇವಲ ಒಂದು ವಸ್ತು ಸಂಗ್ರಹಾಲಯವನ್ನು ಚಾಮರಾಜನಗರ ಜಿಲ್ಲೆಯಲ್ಲಿ ಸ್ಥಾಪಿಸಿತು (2014). ಕೋಲಾರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯವರ ಕಚೇರಿಯ ಹಳೆಯ ಕಟ್ಟಡದಲ್ಲಿ ಹಾಗೂ ಹಾವೇರಿ ಜಿಲ್ಲೆಯಲ್ಲಿ ಸವಣೂರು ನವಾಬನಿಗೆ ಸಂಬಂಧಿತ ಒಂದು ಪಾರಂಪರಿಕ ಅರಮನೆಯಲ್ಲಿ ಸ್ಥಾಪಿಸುವ ಸಲುವಾಗಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿರುವುದು ಹಾಗೂ ವಸ್ತು ಸಂಗ್ರಹಾಲಯಗಳ ಸ್ಥಾಪನೆಗಾಗಿ ಭೂಮಿ ಅಥವಾ ಕಟ್ಟಡದ ಹಂಚಿಕೆಗಾಗಿ ಉಳಿದ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳೊಂದಿಗೆ ಪತ್ರ ವ್ಯವಹಾರಗಳನ್ನು ಮಾಡಲಾಗಿರುವುದು ಹಾಗೂ ಈ ನಿಟ್ಟಿನಲ್ಲಿ ಸೂಕ್ತ ಸಮಯದಲ್ಲಿ ಕ್ರಮವನ್ನು ಕೈಗೊಳ್ಳಲಾಗುವುದು ಎಂಬುದಾಗಿ ಇಲಾಖೆಯು ತಿಳಿಸಿತು (ಜೂನ್ 2022).

ಕೋಲಾರದಲ್ಲಿ ವಸ್ತು ಸಂಗ್ರಹಾಲಯದ ಸ್ಥಾಪನೆಗಾಗಿ ಇಲಾಖೆಗೆ ಹಂಚಿಕೆ ಮಾಡಲಾಗಿದ್ದಂತಹ ಕಟ್ಟಡವು ವಿವಾದದ ಅಡಿಯಲ್ಲಿದ್ದಿತು ಹಾಗೂ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದ ಮುಂದೆ ಬಾಕಿಯಿದ್ದಿತು. ಮುಂದುವರೆದು, ಹಾವೇರಿ ಜಿಲ್ಲೆಯಲ್ಲಿ ಸವಣೂರು ನವಾಬನಿಗೆ ಸಂಬಂಧಿತ ಪಾರಂಪರಿಕ ಕಟ್ಟಡದ ಸಂರಕ್ಷಣಾ ಕಾಮಗಾರಿಯನ್ನು ಅರಮನೆಯ ಮಾಲಿಕತ್ವವು ಖಾಸಗಿ ಮಾಲೀಕರುಗಳಲ್ಲಿ ಇದ್ದಿತಾದರೂ ಅಧಿಸೂಚನೆಯನ್ನೂ ಹೊರಡಿಸದೆಯೇ ಕೈಗೊಳ್ಳಲಾಗಿದ್ದಿತು (***ಕಂಡಿಕೆ 3.6ರಲ್ಲಿ*** ಚರ್ಚಿಸಲಾಗಿರುವುದು). ಮುಂದುವರೆದು, ಒಂದು ವಸ್ತು ಸಂಗ್ರಹಾಲಯದ ಸ್ಥಾಪನೆಗಾಗಿ ಎರಡರಿಂದ ಐದು ಎಕರೆಗಳಷ್ಟು ಭೂಮಿಯನ್ನು ಕೋರಿ ವಿವಿಧ ಜಿಲ್ಲೆಗಳ[48] ಜಿಲ್ಲಾಧಿಕಾರಿಗಳೊಂದಿಗೆ

[46] ಬೆಂಗಳೂರು, ಬೆಳಗಾವಿ, ಹಾಸನ, ಕಲಬುರ್ಗಿ, ರಾಯಚೂರು ಮತ್ತು ಮೈಸೂರು ಜಿಲ್ಲೆಗಳು.

[47] ಅಥಣಿ, ಬೆಂಗಳೂರು, ಹಾಸನ, ಕಲಬುರ್ಗಿ ಕಿತ್ತೂರು, ಮೈಸೂರು ಮತ್ತು ರಾಯಚೂರು.

[48] ಚಿಕ್ಕಬಳ್ಳಾಪುರ, ದಾವಣಗೆರೆ, ರಾಮನಗರ, ತುಮಕೂರು, ಮಂಡ್ಯ, ಉಡುಪಿ, ಧಾರವಾಡ, ಉತ್ತರ ಕನ್ನಡ ಮತ್ತು ವಿಜಯಪುರ.

ಪತ್ರ ವ್ಯವಹಾರಗಳನ್ನು ಜುಲೈ 2009 ಹಾಗೂ ಜನವರಿ 2016ರ ನಡುವೆ ಮಾಡಲಾಗಿದ್ದಿತು, ಈ ಪತ್ರ ವ್ಯವಹಾರಗಳಿಗೆ ಯಾವುದೇ ಪ್ರತಿಕ್ರಿಯೆಯೂ ಬಂದಿರಲಿಲ್ಲ. ನಾಲ್ಕು ವರ್ಷಗಳ ನಂತರವಷ್ಟೇ ದಾವಣಗೆರೆಯ ಹೆಚ್ಚುವರಿ ಜಿಲ್ಲಾಧಿಕಾರಿಯವರು ಭೂಮಿಯು ಲಭ್ಯವಿಲ್ಲದಿರುವ ಬಗ್ಗೆ ನಿರ್ದೇಶಕರು (ವಸ್ತುಸಂಗ್ರಹಾಲಯಗಳು ), ಇವರಿಗೆ ತಿಳಿಸಿದರು (ಡಿಸೆಂಬರ್ 2013).

ಜಿಲ್ಲಾ ಕೇಂದ್ರದ ಒಳಗೆ ಅಥವಾ ಅದರ ಸುತ್ತಮುತ್ತಲ ಪ್ರದೇಶದಲ್ಲಿ ಭೂಮಿ ಅಥವಾ ಕಟ್ಟಡಗಳು ಅಥವಾ ಪಾರಂಪರಿಕ ಕಟ್ಟಡಗಳನ್ನು ಒದಗಿಸುವಂತೆ ಇಲಾಖೆಯು ಸಂಬಂಧಿತ ಜಿಲ್ಲಾಧಿಕಾರಿಗಳನ್ನು ಕೋರಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023). ಆ ರೀತಿ ಒದಗಿಸಿದಂತೆಲ್ಲಾ ನಿರ್ಮಾಣಕ್ಕಾಗಿ ಹಣಕಾಸನ್ನು ಲಭ್ಯವಿರುವಂತೆ ಮಾಡಲಾಗುವುದು. ಆದಾಗ್ಯೂ, ಹಿಂದಿನ ಪತ್ರ ವ್ಯವಹಾರಗಳು ಯಾವುದೇ ಫಲವನ್ನೂ ನೀಡಿರಲಿಲ್ಲವಾದ್ದರಿಂದ ಈ ಪ್ರಕ್ರಿಯೆಯನ್ನು ತ್ವರಿತಗೊಳಿಸುವ ಸಲುವಾಗಿ ಮಾಡಲಾಗಿರುವ ಪ್ರಯತ್ನಗಳ ಬಗ್ಗೆ ಉತ್ತರವು ಮೌನವಾಗಿದ್ದಿತು.

***ಕಲಾಕೃತಿಗಳ ಪ್ರದರ್ಶನಕ್ಕಾಗಿ ಒಂದು ಆವರ್ತನೀಯ ಅಥವಾ ಕ್ರಮಾವರ್ತನೀಯ ನೀತಿಯ ಅನುಪಸ್ಥಿತಿ***

**5.3** ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ (ಎಎಸ್ಐ) ವಸ್ತು ಸಂಗ್ರಹಾಲಯಗಳಿಗಾಗಿ ಮಾರ್ಗಸೂಚಿಗಳು ಎಲ್ಲಾ ವಸ್ತು ಸಂಗ್ರಹಾಲಯಗಳಲ್ಲಿ ಪ್ರಾಚೀನ ಹಸ್ತಕೃತಿಗಳ ಪ್ರದರ್ಶನ ಮತ್ತು ಸಂಗ್ರಹಣೆಗಾಗಿ ಪ್ರಮಾಣಕವನ್ನು ನಿರ್ದಿಷ್ಟಪಡಿಸಿರುವುದು. ಸಂಗ್ರಹಣೆಗಳ ಪಾಲನೆಯ ಪೂರ್ವಭಾವಿ ಯೋಜನೆಯು ಪ್ರದರ್ಶನಗೊಂಡಿರುವಂತಹ ಹಾಗೂ ಅಲ್ಲದೆಯೇ ಮೀಸಲಾಗಿಡಲಾಗಿರುವಂತಹ ಸಂಗ್ರಹಣೆ ಮಾಡಲಾಗಿರುವಂತಹ ವಸ್ತುಗಳ ಮೇಲೆ (ಅದರಲ್ಲೂ ವಿಶೇಷವಾಗಿ ಅವುಗಳು ಸೂಕ್ಷ್ಮ /ಸುಲಭವಾಗಿ ತುಂಡುತುಂಡಾಗುವ ಹಾಗೂ ಸುಲಭವಾಗಿ ಗುರಿಯಾಗಬಹುದಾದಂತಹ) ಹವಾಮಾನ ಪರಿಸ್ಥಿತಿಗಳು, ಬೆಳಕು, ಸೂಕ್ಷ್ಮಜೀವಿಗಳ ಬೆಳವಣಿಗೆ, ಇತ್ಯಾದಿಗಳ ಪ್ರಭಾವವನ್ನು ನಿರ್ಧಾರಣೆ ಮಾಡುವ ಸಲುವಾಗಿ ಪ್ರತಿಬಂಧಕ ಸಂರಕ್ಷಣೆ ಹಾಗೂ ಅವಿರತ ಮೇಲ್ವಿಚಾರಣೆಯನ್ನು ಒಳಗೊಂಡಿರತಕ್ಕದ್ದು.

ಒಂದು ವಸ್ತು ಪ್ರದರ್ಶನದಲ್ಲಿ ಅಥವಾ ಗ್ಯಾಲರಿಯಲ್ಲಿ ಪ್ರಾಚೀನ ಹಸ್ತಕೃತಿಗಳ ಒಂದು ಆವರ್ತನೀಯ ಅಥವಾ ಕ್ರಮಾವರ್ತನೀಯ ಪ್ರಕ್ರಿಯೆಯು ವಸ್ತು ಸಂಗ್ರಹಾಲಯದಲ್ಲಿರುವಂತಹ ಎಲ್ಲಾ ವಸ್ತುಗಳನ್ನು ಕಾಲಾನುಕಾಲಕ್ಕೆ ಪ್ರದರ್ಶಿಸಬಹುದಾದಂತಹ ರೀತಿಯಲ್ಲಿ ಪ್ರದರ್ಶನದಲ್ಲಿರುವಂತಹ ಒಂದು ವಸ್ತುವನ್ನು ಮತ್ತೊಂದು ವಸ್ತುವಿನಿಂದ ಬದಲಾಯಿಸುವುದರ ಬಗ್ಗೆ ಆಗಿರುತ್ತದೆ, ಇದು ಕಳ್ಳತನ ಮತ್ತು ಲೂಟಿ, ಕಂಪನಗಳಿಗೆ ವಸ್ತುಗಳು ಮುಕ್ತವಾಗಿರುವುದು, ದೂಳು, ಒಂದು ದೀರ್ಘಾವಧಿಯಲ್ಲಿ ತಾಪಮಾನದಲ್ಲಿನ ಏರುಪೇರುಗಳು ಹಾಗೂ ತೇವಾ ಅಥವಾ ತಂಡಿ, ಇಂತಹವುಗಳ ಸಂಭಾವ್ಯ ಅಪಾಯವನ್ನು ತಪ್ಪಿಸುವ ಸಲುವಾಗಿ ಅಗತ್ಯವಾಗಿರುವುದು. ತಮ್ಮ ಪ್ರಾಚೀನ ಹಸ್ತಕೃತಿಗಳ ಸಂಪೂರ್ಣ ಸಂಗ್ರಹಣೆಯನ್ನು ವೀಕ್ಷಕರುಗಳಿಗೆ ಒಂದು ರೀತಿಯಲ್ಲಿ ಅತ್ಯುತ್ತಮವಾಗಿ ಚಿಂತಿಸಲಾಗಿರುವಂತಹ ಪೂರ್ವಭಾವಿಯಾಗಿ ಯೋಜಿಸಲಾಗಿರುವಂತಹ ಆವರ್ತನೀಯ ಅಥವಾ ಕ್ರಮಾವರ್ತನೀಯ ಪ್ರಕ್ರಿಯೆಯ ನಿಗದಿತ ಪ್ರದರ್ಶನ ವೇಳಾಪಟ್ಟಿಯನ್ನು ಕಾರ್ಯಗತಗೊಳಿಸುವುದರ ಮೂಲಕ ಭೌತಿಕವಾಗಿ ಹಾಗೂ ಅಲ್ಲದೆಯೇ ವಸ್ತು ಸಂಗ್ರಹಾಲಯದ ಜಾಲತಾಣಗಳಲ್ಲಿ ಪ್ರದರ್ಶಿಸತಕ್ಕದ್ದು ಎಂಬುದಾಗಿ ಸಾರಿಗೆ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಇಲಾಖೆಗಳ ಸಂಸತ್ತಿನ ಸ್ಥಾಯಿ ಸಮಿತಿಯು ಶಿಫಾರಸು ಮಾಡಿರುವುದು (ಜುಲೈ 2021).

ಪ್ರಾಚೀನ ಹಸ್ತಕೃತಿಗಳ ಪ್ರದರ್ಶನಕ್ಕಾಗಿ ಇಲಾಖೆಯು ನಿಯತಕಾಲಿಕ ಆವರ್ತನೀಯ ಅಥವಾ ಕ್ರಮಾವರ್ತನೀಯ ಪ್ರಕ್ರಿಯೆಯನ್ನು ಹೊಂದಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ವಿವಿಧ ವಸ್ತು ಸಂಗ್ರಹಾಲಯಗಳಲ್ಲಿ ಪ್ರದರ್ಶಿಸಲಾಗಿರುವಂತಹ ಹಾಗೂ ಮೀಸಲಾಗಿರಿಸಿರುವಂತಹ ಪ್ರಾಚೀನ ಹಸ್ತಕೃತಿಗಳ ವಿವರಗಳನ್ನು ಈ ಕೆಳಗೆ ವಿವರಿಸಲಾಗಿರುವುದು:

**ಕೋಷ್ಟಕ 5.1: ಪ್ರದರ್ಶಿಸಲಾಗಿರುವಂತಹ ಹಾಗೂ ಮೀಸಲಾಗಿರಿಸಿರುವಂತಹ ವಸ್ತುಗಳ ವಿವರಗಳು**

| ಕ್ರಮ ಸಂಖ್ಯೆ | ವಸ್ತು ಸಂಗ್ರಹಾಲಯಗಳ ಹೆಸರು | ಹೊಂದಲಾಗಿದ್ದ ವಸ್ತುಗಳ ಸಂಖ್ಯೆ | ಪ್ರದರ್ಶಿಸಲಾಗಿದ್ದ ವಸ್ತುಗಳ ಸಂಖ್ಯೆ | ಮೀಸಲಿರಿಸಲಾಗಿದ್ದ ವಸ್ತುಗಳ ಸಂಖ್ಯೆ | ಮೀಸಲಿರಿಸಲಾಗಿದ್ದ ವಸ್ತುಗಳ ಶೇಕಡಾವಾರು ಸಂಖ್ಯೆ |
|---|---|---|---|---|---|
| 1 | ಸರ್ಕಾರಿ ವಸ್ತು ಸಂಗ್ರಹಾಲಯ, ಅಥಣಿ | 75 | 60 | 15 | 20 |
| 2 | ಕಿತ್ತೂರು ರಾಣಿ ಚೆನ್ನಮ್ಮ ಸ್ಮಾರಕ ಸರ್ಕಾರಿ ವಸ್ತು ಸಂಗ್ರಹಾಲಯ | 649 | 232 | 417 | 64 |
| 3 | ಸರ್ಕಾರಿ ವಸ್ತು ಸಂಗ್ರಹಾಲಯ, ಬೆಂಗಳೂರು | 6,798 | 1,450 | 5,348 | 79 |
| 4 | ವೆಂಕಟಪ್ಪ ಕಲಾ ಗ್ಯಾಲರಿ, ಬೆಂಗಳೂರು | 735 | 250 | 485 | 66 |
| 5 | ಸರ್ಕಾರಿ ವಸ್ತು ಸಂಗ್ರಹಾಲಯ, ಚಿತ್ರದುರ್ಗ | 729 | 265 | 464 | 64 |
| 6 | ಸರ್ಕಾರಿ ವಸ್ತು ಸಂಗ್ರಹಾಲಯ, ಶಿವಮೊಗ್ಗ | 1,486 | 0 | 1,486 | 100 |
| 7 | ದೀವಾನ್ ಪೂರ್ಣಯ್ಯ ಸರ್ಕಾರಿ ವಸ್ತು ಸಂಗ್ರಹಾಲಯ, ಯಳಂದೂರು | 138 | 107 | 31 | 22 |
| 8 | ಶ್ರೀಮಂತಿ ಬಾಯಿ ಸ್ಮಾರಕ ಸರ್ಕಾರಿ ವಸ್ತು ಸಂಗ್ರಹಾಲಯ, ಮಂಗಳೂರು | 4,935 | 1,144 | 3,791 | 77 |
| 9 | ಸರ್ಕಾರಿ ವಸ್ತು ಸಂಗ್ರಹಾಲಯ, ಹಾಸನ | 481 | 376 | 105 | 22 |
| 10 | ಸರ್ಕಾರಿ ವಸ್ತು ಸಂಗ್ರಹಾಲಯ, ಮಡಿಕೇರಿ | 714 | 621 | 93 | 13 |
| 11 | ಶ್ರೀ ಚಾಮರಾಜೇಂದ್ರ ಸ್ಮಾರಕಸರ್ಕಾರಿ ವಸ್ತು ಸಂಗ್ರಹಾಲಯ, ಶ್ರೀರಂಗಪಟ್ಟಣ | 282 | 206 | 76 | 27 |
| 12 | ಸರ್ಕಾರಿ ವಸ್ತು ಸಂಗ್ರಹಾಲಯ, ವೆಲ್ಲಿಂಗ್‌ಟನ್ ಹೌಸ್, ಮೈಸೂರು | 525 | 42 | 483 | 92 |


**(ಮೂಲ : ಇಲಾಖೆಯು ಒದಗಿಸಿದ ಮಾಹಿತಿಯಂತೆ.)**

ಮೇಲಿನ ಕೋಷ್ಟಕದಿಂದ, ಈ 12 ವಸ್ತುಸಂಗ್ರಹಾಲಯಗಳು ಹೊಂದಿದ್ದಂತಹ ಸಂಗ್ರಹಣೆ ಗಳ ಗಾತ್ರವು ಪ್ರದರ್ಶಿಸಲಾಗಿದ್ದಂತಹ ವಸ್ತುಗಳಿಗಿಂತ ಅಧಿಕವಾಗಿದ್ದವು ಎಂಬುದನ್ನು ಗಮನಿಸಬಹುದು. ಆದ್ದರಿಂದ, ಪ್ರಾಚೀನ ಹಸ್ತಕೃತಿಗಳನ್ನು ಒಂದು ನ್ಯಾಯಸಮ್ಮತ ಕಾಲಮಿತಿಯೊಳಗೆ ಪ್ರದರ್ಶಿಸಬಹುದಾದಂತಹ ರೀತಿಯಲ್ಲಿ ಇಲಾಖೆಯು ಪ್ರಾಚೀನ ಹಸ್ತಕೃತಿಗಳ ಪ್ರದರ್ಶನಕ್ಕಾಗಿ ನಿಯತಕಾಲಿಕ ಆವರ್ತನೀಯ ಅಥವಾ ಕ್ರಮಾವರ್ತನೀಯ ಪ್ರಕ್ರಿಯೆಯ ಒಂದು ದೃಢವಾದಂತಹ ಕಾರ್ಯನೀತಿಯನ್ನು ಹೊಂದುವ ಅಗತ್ಯತೆಯಿರುತ್ತದೆ.

ರಾಯಚೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಜಂಟಿ ಪರೀಕ್ಷಣೆಯ ವೇಳೆಯಲ್ಲಿ ಗಮನಿಸಲಾದಂತೆ ಪ್ರಾಚೀನ ಹಸ್ತಕೃತಿಗಳ ಸ್ಥಿತಿಗತಿಗಳು ಈ ಕೆಳಗಿನಂತಿದ್ದವು:




**ಛಾಯಾಚಿತ್ರ ಸಂಖ್ಯೆ 5.2: ರಾಯಚೂರಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಪ್ರಾಚೀನ ಕಲಾಕೃತಿಗಳು ಪ್ರದರ್ಶನಗೊಳ್ಳದೆಯೇ ಬಿದ್ದಿರುವುದು.**




**ಛಾಯಾಚಿತ್ರ ಸಂಖ್ಯೆ 5.3 ರಾಯಚೂರಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸದೆಯೇ ಇಡಲಾಗಿರುವಂತಹ ಚಿತ್ರಕಲಾ ಕೃತಿಗಳು.**

ಸರ್ಕಾರವು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳನ್ನು ಒಪ್ಪಿಕೊಂಡಿತು ಹಾಗೂ ಪ್ರಾಚೀನ ಹಸ್ತಕೃತಿಗಳನ್ನು ನಿಯತಕಾಲಿಕ ಆವರ್ತನದಲ್ಲಿ ಪ್ರದರ್ಶಿಸುವ ಸಲುವಾಗಿ ಇಲಾಖೆಯು ಕ್ರಮವನ್ನು ಕೈಗೊಳ್ಳುವುದು ಎಂಬುದಾಗಿ ಉತ್ತರಿಸಿತು (ಆಗಸ್ಟ್ 2023).

***ಸಮರ್ಪಕ ಸಂಗ್ರಹಣಾ ಅನುಕೂಲತೆಗಳ ಅನುಪಸ್ಥಿತಿ***

**5.4** ವಸ್ತುಸಂಗ್ರಹಾಲಯಗಳು ಪ್ರದರ್ಶಿಸಲು ಸಾಧ್ಯವಿರದ ಪ್ರಾಚೀನ ಹಸ್ತಕೃತಿಗಳ ಸಂಗ್ರಹಣೆಗಾಗಿ ಪ್ರದರ್ಶನ ಪ್ರದೇಶಗಳಿಂದ ಪ್ರತ್ಯೇಕವಾಗಿ ಒಂದು ಸಮರ್ಪಕ ಸ್ಥಳವನ್ನು ಹೊಂದಿರತಕ್ಕದ್ದು. ಸಂಗ್ರಹಣಾ ಪ್ರದೇಶವು ಪ್ರಾಚೀನ ಹಸ್ತಕೃತಿಗಳನ್ನು ಸುರಕ್ಷಿತವಾಗಿ ಇಡುವ ಸಲುವಾಗಿ ಸಾಕಷ್ಟು ಸ್ಥಳವನ್ನು ಹೊಂದಿರತಕ್ಕದ್ದು ಹಾಗೂ ಅವುಗಳನ್ನು ಅತ್ಯುತ್ತಮವಾಗಿ ಸಂರಕ್ಷಿಸಲಾಗಿರುವುದು ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ವಸ್ತು ಸಂಗ್ರಹಾಲಯಗಳಿಗಾಗಿ ಮಾರ್ಗಸೂಚಿಯು, ದೀರ್ಘಾವಧಿ ರಕ್ಷಣೆ ಮತ್ತು ಸುರಕ್ಷತೆಗಾಗಿ ವಸ್ತು ಸಂಗ್ರಹಾಲಯಗಳ ಸಂಗ್ರಹಣೆಗಳನ್ನು ಹಾಗೂ ಉಗ್ರಾಣದಲ್ಲಿ ಇರುವವುಗಳನ್ನು ಸಂರಕ್ಷಿಸುವ ಸಲುವಾಗಿ ಅತ್ಯುತ್ತಮ ಪರಿಪಾಠಗಳನ್ನು ಅಳವಡಿಸಿಕೊಳ್ಳುವಂತೆ ನಿರ್ದಿಷ್ಟಪಡಿಸಿರುವುದು. ರಾಜ್ಯವು ಪ್ರದರ್ಶನಗೊಂಡಿರುವ ಹಾಗೂ ದಾಸ್ತಾನಿನಲ್ಲಿ/ಉಗ್ರಾಣದಲ್ಲಿ ಇಟ್ಟಿರುವ ವಸ್ತು ಸಂಗ್ರಹಾಲಯ ಸಂಗ್ರಹಣೆಗಳಿಗಾಗಿ ಯಾವುದೇ ಸಂಗ್ರಹಣಾ ಕಾರ್ಯನೀತಿಯನ್ನು ರೂಪಿಸಿರಲಿಲ್ಲ. ರಾಜ್ಯ ಕಾರ್ಯನೀತಿಯ ಅನುಪಸ್ಥಿತಿಯಲ್ಲಿ , ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ವಸ್ತು ಸಂಗ್ರಹಾಲಯಗಳಿಗಾಗಿ ಮಾರ್ಗಸೂಚಿಯನ್ನು ಅನುಸರಿಸತಕ್ಕದ್ದು.


ಜಂಟಿ ಪರೀಕ್ಷಣೆ ಮಾಡಲಾದಂತಹ ಯಾವುದೇ ವಸ್ತುಸಂಗ್ರಹಾಲಯಗಳು ಮೀಸಲಿಡಲಾಗಿದ್ದಂತಹ ಪ್ರಾಚೀನ ಹಸ್ತಕೃತಿಗಳ ಸುರಕ್ಷತೆಗಾಗಿ ಒಂದು ಸಮರ್ಪಕ ಸಂಗ್ರಹಣಾ ಅನುಕೂಲತೆಯನ್ನು ಹೊಂದಿರಲಿಲ್ಲ. ಎಂಟು ವಸ್ತು ಸಂಗ್ರಹಾಲಯಗಳ ಪೈಕಿ ಆರು ವಸ್ತುಸಂಗ್ರಹಾಲಯಗಳು *ಶೇಕಡ 20ರಿಂದ ಶೇಕಡ 92ರಷ್ಟು* ಪ್ರಾಚೀನ ಹಸ್ತಕೃತಿಗಳ ಮೀಸಲು ದಾಸ್ತಾನನ್ನು ಹೊಂದಿದ್ದವು. ಪ್ರಾಚೀನ ಹಸ್ತಕೃತಿಗಳು ವಸ್ತು ಸಂಗ್ರಹಾಲಯದ ಕಟ್ಟಡದ ಒಳಗೆ ನೆಲದ ಮೇಲೆ ಅಥವಾ ವಸ್ತು ಸಂಗ್ರಹಾಲಯದ ಹೊರಗೆ ಎಲ್ಲೆಂದರಲ್ಲಿ ಬಿದ್ದಿರುವುದು ಕಂಡುಬಂದಿತು. ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಣಾ ಅನುಕೂಲತೆಗಳ ಕೊರತೆಯು ಪ್ರಾಚೀನ ಹಸ್ತಕೃತಿಗಳ ಮೇಲೆ ದೂಳು ಸೇರಿಕೊಳ್ಳುವಲ್ಲಿ, ತೇವ ಹಾಗೂ ಪಾಚಿ ಬೆಳೆಯುವಲ್ಲಿ ಪರಿಣಮಿಸಿದ್ದಿತು.




**ಛಾಯಾಚಿತ್ರ ಸಂಖ್ಯೆ 5.4: ಹಾಸನದಲ್ಲಿ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಸಮರ್ಪಕ ಸಂರಕ್ಷಣೆಯಿಲ್ಲದೆಯೇ ಪ್ರಾಚೀನ ಹಸ್ತಕೃತಿಗಳನ್ನು ಹೊರಗಡೆ ಅವ್ಯವಸ್ಥಿತವಾಗಿ ಇಡಲಾಗಿರುವುದು.**




**ಛಾಯಾಚಿತ್ರ ಸಂಖ್ಯೆ 5.5: ಕಲಬುರಗಿಯ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿರುವ ಪ್ರಾಚೀನ ಸ್ಮಾರಕವು ತುಕ್ಕು ಹಿಡಿದಿರುವುದು ಹಾಗೂ ಹಾಳಾಗಿರುವುದು.**




**ಛಾಯಾಚಿತ್ರ ಸಂಖ್ಯೆ 5.6: ಕಿತ್ತೂರಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿರುವಂತಹ ಪ್ರಾಚೀನ ಹಸ್ತಕೃತಿಯ ಮೇಲೆ ಪಾಚಿ ಬೆಳೆದಿರುವುದು.**

ಬೆಂಗಳೂರು ವಸ್ತು ಸಂಗ್ರಹಾಲಯದ ಪ್ರಾಚೀನ ಹಸ್ತಕೃತಿಗಳಿಗೆ ಸಮರ್ಪಕ ಮತ್ತು ವೈಜ್ಞಾನಿಕ ಸಂಗ್ರಹಣಾ ಪ್ರದೇಶವನ್ನು ಇಲಾಖೆಗೆ ಸೇರಿದ ಬೆಂಗಳೂರಿನ ನಾಗರಭಾವಿಯಲ್ಲಿನ ಜಾಗದಲ್ಲಿ ನಿರ್ಮಿಸುವ ಸಲುವಾಗಿ ಒಂದು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದೆ. ಅಲ್ಲದೇ ಸಂಬಂಧ ಪಟ್ಟ ವಸ್ತುಸಂಗ್ರಹಾಲಯಗಳಲ್ಲಿ ಪ್ರಾಚೀನ ಹಸ್ತಕೃತಿಗಳನ್ನು ಸಂಗ್ರಹಿಸುವ ಸ್ಥಳವು ಲಭ್ಯವಿರದಿದ್ದರೆ ರಾಜ್ಯದಲ್ಲಿ ಒಂದು ಸಾಮಾನ್ಯ ಸಂಗ್ರಹಣಾ ಪ್ರದೇಶವನ್ನು ನಿರ್ಮಿಸಲಾಗುವುದು ಎಂದು ಸರ್ಕಾರವು ಉತ್ತರಿಸಿತು (ಆಗಸ್ಟ್ 2023).

***ನಿಯತಕಾಲಿಕ ಪರಿಶೀಲನೆಗಾಗಿ ವ್ಯವಸ್ಥೆಯ ಕೊರತೆ***

**5.5** ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ವಸ್ತು ಸಂಗ್ರಹಾಲಯಗಳಿಗಾಗಿ ಮಾರ್ಗಸೂಚಿಯು ಪ್ರದರ್ಶನಕ್ಕಿಟ್ಟಿರುವಂತಹ ಹಾಗೂ ಉಗ್ರಾಣ/ದಾಸ್ತಾನಿನಲ್ಲಿರುವ ವಸ್ತುಗಳ ದ್ವೈ-ಮಾಸಿಕ ಮೇಲ್ವಿಚಾರಣೆಗಾಗಿ ಒಂದು ಸಂಗ್ರಹಣಾ ಪಾಲನಾ ಪೂರ್ವಭಾವಿ ಯೋಜನೆಯನ್ನು

ರೂಪಿಸುವುದನ್ನು ನಿರ್ದಿಷ್ಟಪಡಿಸಿರುತ್ತದೆ. ಪ್ರಾಚೀನ ಹಸ್ತಕೃತಿಗಳ ನಿಯತಕಾಲಿಕ ಪರಿಶೀಲನೆಯು ಪ್ರಾಚೀನ ಹಸ್ತಕೃತಿಗಳ ಲಭ್ಯತೆ ಮತ್ತು ಇರುವಿಕೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಹಾಗೂ ಅಲ್ಲದೆಯೇ ಪ್ರಾಚೀನ ಹಸ್ತಕೃತಿಗಳ ಸ್ಥಿತಿಗತಿಗಳನ್ನು ನಿರ್ಧಾರಣೆ ಮಾಡುವ ಸಲುವಾಗಿ ಅತ್ಯಗತ್ಯವಾಗಿರುತ್ತದೆ. ಅದರ ಅನುಪಸ್ಥಿತಿಯಲ್ಲಿ, ಪ್ರಾಚೀನ ಹಸ್ತಕೃತಿಗಳು ಕಳ್ಳತನವಾಗುವ ಅಥವಾ ಅವುಗಳು ಹಾಳಾಗುವುದನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ.

ನಿರ್ದೇಶಕರ ಕಚೇರಿಯು ಕಳೆದ ಹತ್ತು ವರ್ಷಗಳಲ್ಲಿ ವಸ್ತುಸಂಗ್ರಹಾಲಯಗಳು ಮತ್ತು ಪ್ರಾಚೀನಾವಶೇಷಗಳು/ಪ್ರಾಚೀನ ಹಸ್ತಕೃತಿಗಳ ನಿಯತಕಾಲಿಕ ಪರೀಕ್ಷಣೆಗಳನ್ನು ನಡೆಸಿರಲಿಲ್ಲ. ಮುಂದುವರೆದು, ನಿರ್ದೇಶಕರು (ವಸ್ತುಸಂಗ್ರಹಾಲಯಗಳು ) ಪ್ರಾರಂಭದಿಂದಲೂ, ಸರ್ಕಾರಿ ವಸ್ತುಸಂಗ್ರಹಾಲಯಗಳು ಮತ್ತು ಪ್ರಾಚೀನಾವಶೇಷಗಳು/ಪ್ರಾಚೀನ ಹಸ್ತಕೃತಿಗಳ ಭೌತಿಕ ಪರೀಕ್ಷಣೆಗಾಗಿ ಯಾವುದೇ ರಿಜಿಸ್ಟರನ್ನು ನಿರ್ವಹಿಸಿರಲಿಲ್ಲ. ಆಯುಕ್ತರು, ಪುರಾತತ್ವ, ವಸ್ತುಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಇವರು ಕೂಡ ವಸ್ತು ಸಂಗ್ರಹಾಲಯಗಳ ನಿಯತಕಾಲಿಕ ಪರೀಕ್ಷಣೆಗಾಗಿ ಗುರಿಗಳನ್ನು ನಿಗದಿಪಡಿಸಿರಲಿಲ್ಲ.




**ಛಾಯಾಚಿತ್ರ ಸಂಖ್ಯೆ 5.7: ನಿಯತಕಾಲಿಕ ಪರೀಕ್ಷಣೆಯ ಕೊರತೆಯು ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಹರಿದುಹೋಗಿರುವಂತಹ ಸಂರಕ್ಷಿಸಲ್ಪಟ್ಟಿರದ ವರ್ಣಚಿತ್ರಗಳನ್ನು ಪ್ರದರ್ಶಿಸುವಲ್ಲಿ ಪರಿಣಮಿಸಿರುವುದು.**

ಇಲಾಖೆಯು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದ ಅಂಶಗಳಿಗೆ ಉತ್ತರಿಸುವ ವೇಳೆಯಲ್ಲಿ, ನಿರ್ದೇಶಕರು ವಸ್ತು ಸಂಗ್ರಹಾಲಯಗಳ ಪ್ರವಾಸಗಳ ವೇಳೆಯಲ್ಲಿ ಸರ್ಕಾರಿ ವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡಿದ್ದರು ಹಾಗೂ ಮೌಖಿಕವಾಗಿ ಅಗತ್ಯ ನಿರ್ದೇಶನಗಳನ್ನು ನೀಡಿದ್ದರು ಎಂಬುದಾಗಿ ಉತ್ತರಿಸಿತು (ಜೂನ್ 2022). ಆದಾಗ್ಯೂ, ಸರ್ಕಾರಿ ವಸ್ತು ಸಂಗ್ರಹಾಲಯಗಳ ನಿಯತಕಾಲಿಕ ಪರೀಕ್ಷಣೆಗಳನ್ನು ನಡೆಸಲು ಹಾಗೂ ಪರೀಕ್ಷಣಾ ರಿಜಿಸ್ಟರು/ಟಿಪ್ಪಣಿಗಳನ್ನು ಮುಂದಿನ ದಿನಗಳಲ್ಲಿ ನಿರ್ವಹಿಸಲು ಒಪ್ಪಿಕೊಂಡಿತು. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳಿಗೆ ಸರ್ಕಾರ ಉತ್ತರ ನೀಡಿರಲಿಲ್ಲ.

***ಪ್ರಾಚೀನಾವಶೇಷಗಳ ಮಾಹಿತಿಯನ್ನು ಡಿಜಿಟಲೀಕರಣಗೊಳಿಸುವಲ್ಲಿನ ವಿಳಂಬ***

**5.6** ಇಲಾಖೆಯು ಪ್ರದರ್ಶಿಸಲಾಗಿದ್ದಂತಹ ಅಥವಾ ವಸ್ತು ಸಂಗ್ರಹಾಲಯಗಳಲ್ಲಿ ಮತ್ತು ಕಲಾ ಗ್ಯಾಲರಿಯಲ್ಲಿ ಇದ್ದಂತಹ ಪ್ರಾಚೀನ/ಅತ್ಯಮೂಲ್ಯವಾದಂತಹ ಪ್ರಾಚೀನಾವಶೇಷಗಳನ್ನು ತನ್ನ ಸ್ವಾಧೀನದಲ್ಲಿ ಹೊಂದಿದ್ದಿತು. ಪುರಾತತ್ವಶಾಸ್ತ್ರೀಯ ಕೇಂದ್ರ ಸಲಹಾ ಮಂಡಳಿಯಿಂದ (ಸಿಎಬಿಎ) ಸಲಹೆಗಳ ಆಧಾರದ ಮೇರೆಗೆ, ಅವುಗಳ ಸುರಕ್ಷತೆ ಮತ್ತು ಪ್ರಾಚೀನಾವಶೇಷಗಳ ಭದ್ರತೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯು ಪ್ರತಿಯೊಂದು

ಪ್ರಾಚೀನಾವಶೇಷದ 21[49] ಅಂಶಗಳ ದಾಖಲೀಕರಣದ ಅಗತ್ಯತೆಯನ್ನು ಹೊಂದಿದ್ದಂತಹ ಪ್ರಾಚೀನ ಸ್ಮಾರಕಗಳು ಮತ್ತು ಪ್ರಾಚೀನಾವಶೇಷಗಳ ಮೇಲಿನ ಅಭಿಯಾನ (ಎನ್ಎಂಎಂಎ) ನಮೂನೆಯಲ್ಲಿ ಎಲ್ಲಾ ಪ್ರಾಚೀನಾವಶೇಷಗಳ ಸಮಾನ ರಾಷ್ಟ್ರೀಯ ಅಭಿಯಾನದ ಅಡಿಯಲ್ಲಿ ಡಿಜಿಟಲೀಕರಣಗೊಳಿಸುವಂತೆ ಕೋರಿದ್ದಿತು (ಅಕ್ಟೋಬರ್/ಡಿಸೆಂಬರ್ 2016).

ಡಿಜಿಟಲೀಕರಣಗೊಳಿಸಲಾದಂತಹ ಮಾಹಿತಿಗಾಗಿ ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ಕೋರಿಕೆಯನ್ನು ಅನುಸರಿಸುವ ಸಲುವಾಗಿ, ನಿರ್ದೇಶಕರು (ವಸ್ತುಸಂಗ್ರಹಾಲಯಗಳು ), ಇವರು ಅಗತ್ಯ ಮಾಹಿತಿಯನ್ನು ಒಳಗೊಂಡಂತೆ ದಾಖಲೀಕರಣದ ಹಾಳೆಗಳನ್ನು ಒದಗಿಸುವಂತೆ ಎಲ್ಲಾ 16 ವಸ್ತುಸಂಗ್ರಹಾಲಯಗಳು ಮತ್ತು ಕಲಾ ಗ್ಯಾಲರಿಗೆ ನಿರ್ದೇಶಿಸಿದರು.

ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ಐದು ವರ್ಷಗಳೇ ಕಳೆದರೂ, ವಸ್ತು ಸಂಗ್ರಹಾಲಯಗಳಲ್ಲಿ ಹಾಗೂ ಬೆಂಗಳೂರಿನ ಕಲಾ ಗ್ಯಾಲರಿಯಲ್ಲಿ ಪ್ರಾಚೀನಾವಶೇಷಗಳ ಡಿಜಿಟಲ್ ದಾಖಲೀಕರಣ ಕಾರ್ಯವು ಇನ್ನೂ ಪ್ರಗತಿಯಲ್ಲಿದ್ದಿತು, ತಾಮ್ರ, ಲೋಹದ ಸಾಮಾನುಗಳು, ಕಲ್ಲು ಕೆತ್ತನೆಗಳು ಮತ್ತು ಗಂಧದ ಮರದ ವಸ್ತುಗಳಿಗೆ ಸಂಬಂಧಿಸಿದಂತೆ ಮಾತ್ರ ಡಿಜಿಟಲ್ ದಾಖಲೀಕರಣ ಕಾರ್ಯವು ಈ ದಿನಾಂಕದವರೆವಿಗೆ (ಜೂನ್ 2022) ಪೂರ್ಣಗೊಂಡಿದ್ದವು.

- 2017–2020ರ ಮೂರು ಹಣಕಾಸು ಸಾಲುಗಳಿಗೆ ಎಲ್ಲಾ ಪ್ರಾಚೀನಾವಶೇಷಗಳ ಇ–ದಾಖಲೀಕರಣದ ಕಡೆಗೆ ₹ 13.30 ಲಕ್ಷ ಮೊತ್ತದ ಆಯವ್ಯಯ ಹಂಚಿಕೆಗೆ ಪ್ರತಿಯಾಗಿ, ಇಲಾಖೆಯು 2018–19 ಸಾಲಿನಲ್ಲಿ ಕೇವಲ ₹ 1.19 ಲಕ್ಷ ಮೊತ್ತವನ್ನು ಮಾತ್ರ ವೆಚ್ಚ ಮಾಡಿದ್ದಿತು ಹಾಗೂ ಉಳಿದ ₹ 12.11 ಲಕ್ಷ ಮೊತ್ತವು ಉಪಯೋಗಿಸಿಕೊಳ್ಳದೆಯೇ ಸರ್ಕಾರದ ಲೆಕ್ಕಕ್ಕೆ ಹಿಂತಿರುಗಿಸಿತ್ತು.

ಪ್ರಾಚೀನಾವಶೇಷಗಳನ್ನು 2023–24ರಲ್ಲಿ ಡಿಜಿಟಲೀಯವಾಗಿ ದಾಖಲೀಕರಣಗೊಳಿಸಲಾಗುವುದು ಹಾಗೂ ₹ 2.25 ಕೋಟಿ ಅಂದಾಜು ವೆಚ್ಚದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕಾಗಿ ಕರ್ನಾಟಕ ರಾಜ್ಯ ಕೌನ್ಸಿಲ್ಲಿನೊಂದಿಗೆ ಒಂದು ಪರಸ್ಪರ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಲು ತಾನು ಅನುಮೋದನೆ ನೀಡಿರುವುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023). ಐದು ವರ್ಷಗಳು ಕಳೆದರೂ ಪ್ರಾಚೀನಾವಶೇಷಗಳ ಡಿಜಿಟಲೀಕರಣನ್ನು ಕೈಗೆತ್ತಿಕೊಳ್ಳದಿರುವುದರಿಂದ ಉತ್ತರವು ಒಪ್ಪುವಂತಿಲ್ಲ.

*ವರ್ಣಚಿತ್ರಗಳ ಸಂರಕ್ಷಣೆಯಲ್ಲಿ ವಿಳಂಬ*

**5.7** ಇಲಾಖೆಯು ತನ್ನ ವಸ್ತು ಸಂಗ್ರಹಾಲಯಗಳೂ ಮತ್ತು ಬೆಂಗಳೂರಿನಲ್ಲಿರುವಂತಹ ವೆಂಕಟಪ್ಪ ಕಲಾ ಗ್ಯಾಲರಿಯಲ್ಲಿ ಅನೇಕ ಸಂಖ್ಯೆಗಳ ವರ್ಣಚಿತ್ರಗಳನ್ನು ಮತ್ತು ವರ್ಣಕಲೆಗಳನ್ನು ತನ್ನ ಸ್ವಾಧೀನದಲ್ಲಿ ಹೊಂದಿರುವುದು. ಇದು ಡಾ. ಸ್ವೆತೊಸ್ಲವ್ ರೋರಿಚ್‌ರವರ 239 ವರ್ಣಕಲಾ ಚಿತ್ರಗಳ (ರೋರಿಚ್‌ರವರ ವರ್ಣಕಲಾ ಚಿತ್ರಗಳ ಸಂಗ್ರಹಣೆಗಳು) ತಾತ್ಕಾಲಿಕ ಸುಪರ್ದಿಯನ್ನು (ಜನವರಿ 2020) ಒಳಗೊಂಡಿತ್ತು. ಈ ಚಿತ್ರಗಳನ್ನು ರೋರಿಚ್ ವಸ್ತು ಸಂಗ್ರಹಾಲಯ ಸ್ಥಾಪಿತವಾಗುವವರೆಗೂ ಸುರಕ್ಷಿತ ಪಾಲನೆಗಾಗಿ ನಗರ ಅಪರಾಧ ವಿಭಾಗದ ಪೋಲೀಸರು ಸ್ವಾಧೀನ ನೀಡಿದ್ದರು. ಇಲಾಖೆಯು ವರ್ಣಚಿತ್ರಗಳು ಮತ್ತು ಕಲಾಕೃತಿಗಳ ನಿರ್ವಹಣೆಯ ಕೊರತೆಯ ಕಾರಣ ಹಾಗೂ ನಿಕೃಷ್ಟಮಟ್ಟದ ಬೆಳಕಿನ ಅನುಕೂಲತೆಗಳ ಕಾರಣ ಹಾಳಾಗಿರುವ ಕಾರಣವನ್ನು ತಿಳಿಸಿ ಕಲೆ ಮತ್ತು ಸಂಸ್ಕೃತಿ ಪಾರಂಪರೆಗಾಗಿನ ಭಾರತೀಯ ರಾಷ್ಟ್ರೀಯ ಟ್ರಸ್ಟ್, ನವದೆಹಲಿ, ಇವರೊಂದಿಗೆ ವೆಂಕಟಪ್ಪ ಕಲಾ ಗ್ಯಾಲರಿಯಲ್ಲಿನ 118 ಕಲಾಕೃತಿಗಳಿಗಾಗಿ ಹಾಗೂ ಐಎನ್‌ಟಿಎಸಿಎಚ್ ಸಂರಕ್ಷಣಾ ಸಂಸ್ಥೆ, ಚಿತ್ರಕಲಾ ಪರಿಷತ್ತು, ಬೆಂಗಳೂರು, ಇವರೊಂದಿಗೆ ರೋರಿಚ್‌ರವರ 239 ಕಲಾಕೃತಿಗಳಿಗಾಗಿ ಎರಡು ಪರಸ್ಪರ ತಿಳಿವಳಿಕೆ ಪತ್ರಗಳಿಗೆ ಸಹಿ ಮಾಡಿತು (ಮಾರ್ಚ್ 2019 / ನವಂಬರ್ 2020).

---

[49] ವಸ್ತುವಿನ ಶೀರ್ಷಿಕೆ, ಮತ್ತು ವಸ್ತುವಿನ ಪ್ರವರ್ಗ ರಾಜವಂಶಸ್ಥರ ಶೈಲಿ, ಸಾಮಗ್ರಿ, ಗುರುತಿಸುವಿಕೆ ಚಿಹ್ನೆ, ಛಾಯಾಚಿತ್ರ, ಸ್ಥಿತಿಗತಿ, ದಾಖಲಾತಿ ಸಂಖ್ಯೆ ಅಳತೆ ಮತ್ತು ತೂಕ, ಇತ್ಯಾದಿಗಳಿಗೆ ಸಂಬಂಧಿಸಿದಂತೆ ವಿವರಗಳು.

- ಕಾಮಗಾರಿಯು ಸರ್ಕಾರಿ ವಸ್ತು ಸಂಗ್ರಹಾಲಯಗಳಲ್ಲಿನ 86 ವಸ್ತುಗಳನ್ನು ಹಾಗೂ ಕಲಾ ಗ್ಯಾಲರಿಯಲ್ಲಿನ 32 ಕಲಾಕೃತಿಗಳನ್ನು ₹ 32.64 ಲಕ್ಷ ಮೊತ್ತದಷ್ಟು ವೆಚ್ಚದಲ್ಲಿ ನವಂಬರ್ 2020ರ ವೇಳೆಗೆ ನಾಲ್ಕು ಮೈಲುಕಲ್ಲುಗಳ ಮೂಲಕ ಸಂರಕ್ಷಿಸುವುದನ್ನು ಒಳಗೊಂಡಿದ್ದಿತು.

- ಡಾ. ಸ್ವೆತೊಸ್ಲವ್ ರೋರಿಚ್‌ರವರ 239 ಸಂಖ್ಯೆಗಳಷ್ಟು ಕಲಾಕೃತಿಗಳನ್ನು (ವರ್ಣಚಿತ್ರಗಳು) ₹ 83.89 ಲಕ್ಷ ಮೊತ್ತದಷ್ಟು ವೆಚ್ಚದಲ್ಲಿ ಆಗಸ್ಟ್ 2022ರ ವೇಳೆಗೆ ಪೂರ್ಣಗೊಳ್ಳಲು ನಿರ್ದಿಷ್ಟಪಡಿಸಲಾಗಿದ್ದಿತು.



**ಛಾಯಾಚಿತ್ರ ಸಂಖ್ಯೆ 5.8 ಬೆಂಗಳೂರು ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಪೂರ್ವಸ್ಥಿತಿಗೆ ತರಲಾಗಿರುವಂತಹ ಮೈಸೂರು ಕಲಾಕೃತಿ/ವರ್ಣಚಿತ್ರ.**

ಎಲ್ಲಾ 118 ಕಲಾಕೃತಿಗಳ ಸಂರಕ್ಷಣಾ ಕಾರ್ಯವನ್ನು 45ರಿಂದ 181 ದಿನಗಳ ವಿಳಂಬಗಳೊಂದಿಗೆ ಪೂರ್ಣಗೊಳಿಸಲಾಗಿದ್ದಿತು. ರೋರಿಚ್‌ರವರ 239 ವರ್ಣಚಿತ್ರಗಳ ಸಂರಕ್ಷಣಾ ಕಾರ್ಯವನ್ನು ಪಾವತಿಗಳಿಗಾಗಿ ಅನುಮತಿ ನೀಡಲು ಜವಾಬ್ದಾರಿಯುತವಾಗಿದ್ದಂತ ತಜ್ಞರ ಸಮಿತಿಯನ್ನು ಸರ್ಕಾರವು ಪುನರ್-ರಚಿಸಿರಲಿಲ್ಲವಾದ್ದರಿಂದ ಪೂರ್ಣಗೊಳಿಸಿರಲಿಲ್ಲ. (ಜೂನ್ 2022)

ವಿಳಂಬವು ಕೋವಿಡ್ 19 ಪ್ಯಾಂಡೆಮಿಕ್‌ನ ಪ್ರಮುಖ ಕಾರಣದಿಂದ ಆಗಿದ್ದಿತು ಹಾಗೂ ರೋರಿಚ್‌ರವರ 239 ವರ್ಣಚಿತ್ರಗಳ ಪೈಕಿ 120 ವರ್ಣಚಿತ್ರಗಳ ಸಂರಕ್ಷಣಾ ಕಾರ್ಯವು ಪೂರ್ಣಗೊಂಡಿರುವುದು ಹಾಗೂ 90 ವರ್ಣಚಿತ್ರಗಳಿಗೆ ಸಂಬಂಧಿಸಿದಂತೆ ತಜ್ಞರ ಸಮಿತಿಯನ್ನು ಫೆಬ್ರವರಿ 2023ರಲ್ಲಿ ಪುನರ್-ರಚಿಸಿದನಂತರ ಪಾವತಿಯನ್ನು ಬಿಡುಗಡೆಗೊಳಿಸಲಾಗಿರುವುದು.

## ವಸ್ತು ಸಂಗ್ರಹಾಲಯಗಳ ನಿರ್ವಹಣೆ


**5.8** ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ವಸ್ತು ಸಂಗ್ರಹಾಲಯಗಳಿಗಾಗಿ ಮಾರ್ಗಸೂಚಿಗಳು, 2013ರ ಕಂಡಿಕೆ 6.6 ವಸ್ತು ಸಂಗ್ರಹಾಲಯ ಹಾಗೂ ಅದರ ಅನುಕೂಲತೆಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಹೋಗುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಒಂದು ನಿರ್ವಹಣಾ ಪೂರ್ವಭಾವಿ ಯೋಜನೆಯನ್ನು ತಯಾರಿಸುವ ಅಗತ್ಯತೆಯನ್ನು ಹೊಂದಿರುತ್ತದೆ. ವಸ್ತುಸಂಗ್ರಹಾಲಯಗಳು ಐತಿಹಾಸಿಕ ಪ್ರಾಚೀನಾವಶೇಷಗಳು, ನಾಣ್ಯಗಳು, ಪುಸ್ತಕಗಳು, ಹಸ್ತಲಿಪಿಗಳು ಮತ್ತು ದಾಖಲೆಗಳನ್ನು ಹೊಂದಿರುತ್ತವೆ ಹಾಗೂ ಅವುಗಳನ್ನು ವೈಜ್ಞಾನಿಕವಾದಂತಹ ಪದ್ಧತಿಗಳ ಮೂಲಕ ಸಂರಕ್ಷಿಸತಕ್ಕದ್ದು. ಒಂದು ನಿರ್ವಹಣಾ ಪೂರ್ವಭಾವಿ ಯೋಜನೆಯನ್ನು ಹೊಂದಿರುವುದು ಪ್ರಮುಖವಾಗಿರುತ್ತದೆ. ಇಲಾಖೆಯು, ತನ್ನ ನಿಯಂತ್ರಣದಲ್ಲಿ ಬರುವಂತಹ ವಸ್ತು ಸಂಗ್ರಹಾಲಯಗಳಿಗಾಗಿ ಒಂದು ನಿರ್ವಹಣಾ ಪೂರ್ವಭಾವಿ ಯೋಜನೆಯನ್ನು ರೂಪಿಸಿರಲಿಲ್ಲ. ಆದಾಗ್ಯೂ, ಅದರ ಮಾತೃ ಇಲಾಖೆಯಾದ ಪ್ರವಾಸೋದ್ಯಮ ಇಲಾಖೆಯು ವಸ್ತು ಸಂಗ್ರಹಾಲಯಗಳಿಗೆ

ಹೆಚ್ಚಿನ ಸಂಖ್ಯೆಯ ಪ್ರವಾಸಿಗರುಗಳನ್ನು ಆಕರ್ಷಿಸುವ ದೃಷ್ಠಿಯಿಂದ ಕರ್ನಾಟಕ ಸರ್ಕಾರವು ಅನುಮೋದಿಸಿರುವಂತಹ ಪ್ರವಾಸೋದ್ಯಮ ಕಾರ್ಯನೀತಿಯ ಅಡಿಯಲ್ಲಿ ಮಾರ್ಗಸೂಚಿಗಳನ್ನು ರೂಪಿಸಿತು (ಜೂನ್ 2015). ಇಲಾಖೆಯ ನಿಯಂತ್ರಣದ ಅಡಿಯಲ್ಲಿರುವಂತಹ ವಸ್ತು ಸಂಗ್ರಹಾಲಯಗಳು / ಗ್ಯಾಲರಿಗಳು ಕಟ್ಟು ನಿಟ್ಟಾಗಿ ಕಾರ್ಯಗತಗೊಳಿಸುವ ಸಲುವಾಗಿ ಮಾರ್ಗಸೂಚಿಗಳು ಪ್ರಮುಖವಾಗಿ ಖಾಯಂ ಕಟ್ಟಡಗಳು, ಭದ್ರತಾ ಕ್ರಮಗಳು, ವಸ್ತು ಸಂಗ್ರಹಾಲಯಗಳಿಗೆ ಸುಲಭವಾದಂತಹ ಪ್ರವೇಶ ಹಾಗೂ ಭೇಟಿ ನೀಡುವವರುಗಳಿಗೆ ಮೂಲ ಅನುಕೂಲತೆಗಳ ಲಭ್ಯತೆ, ಉತ್ತಮ ಪರಿಸರಕ್ಕೆ ಅನುವು ಹಾಗೂ ಪ್ರದರ್ಶಿಸಲಾಗಿರುವಂತಹ ಪ್ರಾಚೀನ ಹಸ್ತಕೃತಿಗಳ ಬಗ್ಗೆ ಮಾಹಿತಿ, ಇತ್ಯಾದಿಗಳನ್ನು ಒಳಗೊಂಡಿದ್ದಿತು.

***ಸರ್ಕಾರಿ ಮಾರ್ಗಸೂಚಿಗಳೊಂದಿಗೆ ಅಸಮರ್ಪಕವಾದಂತಹ ಅನುಸರಣಾ ಕ್ರಮಗಳು***

**5.8.1** ಆರು ಜಿಲ್ಲೆಗಳಲ್ಲಿ[50] ಇದ್ದಂತಹ ಏಳು ವಸ್ತುಸಂಗ್ರಹಾಲಯಗಳು ಮತ್ತು ಒಂದು ಕಲಾ ಗ್ಯಾಲರಿಯ ಜಂಟಿ ಪರೀಕ್ಷಣೆಯು ಮಾರ್ಗಸೂಚಿಗಳನ್ನು ಅಸಮರ್ಪಕವಾದಂತಹ ರೀತಿಯಲ್ಲಿ ಅನುಸರಿಸಿದ್ದುದು / ಅನುಸರಿಸದಿದ್ದಂತಹ ಈ ಕೆಳಗಿನಂತೆ ಗಮನಾರ್ಹವಾದಂತಹ ದೃಷ್ಟಾಂತಗಳನ್ನು ತೋರಿಸಿಕೊಟ್ಟಿತು.

- ಎಲ್ಲಾ ಏಳು ವಸ್ತುಸಂಗ್ರಹಾಲಯಗಳು ಮತ್ತು ಕಲಾ ಗ್ಯಾಲರಿಯು ಪ್ರಾಚೀನ ಹಸ್ತಕೃತಿಗಳ ಸಂರಕ್ಷಣೆ ಮತ್ತು ಪ್ರದರ್ಶನಕ್ಕಾಗಿ ಖಾಯಂ ಕಟ್ಟಡಗಳನ್ನು ಹೊಂದಿರುವವು. ಬೆಂಗಳೂರು, ಕಿತ್ತೂರು, ರಾಯಚೂರು, ಕಲಬುರಗಿ ಮತ್ತು ಮೈಸೂರಿನಲ್ಲಿರುವ ಐದು ವಸ್ತುಸಂಗ್ರಹಾಲಯಗಳು ರಾಜ್ಯ ಸಂರಕ್ಷಿತ ಸ್ಮಾರಕಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದವು.




**ಛಾಯಾಚಿತ್ರ ಸಂಖ್ಯೆ 5.9: ಕಿತ್ತೂರಿನಲ್ಲಿ ರಾಜ್ಯ ಸಂರಕ್ಷಿತ ಪುರಾತತ್ವ ಸ್ಮಾರಕದಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಸರ್ಕಾರಿ ವಸ್ತು ಸಂಗ್ರಹಾಲಯ.**


[50] ಮೈಸೂರು, ಬೆಂಗಳೂರು ನಗರ, ಬೆಳಗಾವಿ, ಹಾಸನ, ರಾಯಚೂರು ಮತ್ತು ಕಲಬುರಗಿ.



**ಛಾಯಾಚಿತ್ರ ಸಂಖ್ಯೆ 5.10: ಮೈಸೂರಿನಲ್ಲಿ ಒಂದು ಪಾರಂಪರಿಕ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಸರ್ಕಾರಿ ವಸ್ತು ಸಂಗ್ರಹಾಲಯ (200 ವರ್ಷಗಳಷ್ಟು ಹಳೆಯದಾದಂತಹ ವೆಲ್ಲಿಂಗ್‌ಟನ್ ಲಾಡ್ಜ್, ಇಲ್ಲಿ ಕಾಲೊನೆಲ್ ಆರ್ಥರ್ ವೆಲ್ಲೆಸ್ಲಿ ಕ್ರಿಸ್ತಶಕ 1799ರಿಂದ 1801ರ ಅವಧಿಯಲ್ಲಿ ವಾಸಿಸುತ್ತಿದ್ದರು.**

ಆಯಾ ವಸ್ತುಸಂಗ್ರಹಾಲಯಗಳ ಉಸ್ತುವಾರಿ ಹೊಂದಿರುವ ಕ್ಯುರೇಟರ್‌ಗೆ ಪ್ರತ್ಯೇಕ ಕಚೇರಿ ಇಲ್ಲದಿರುವುದರಿಂದ ಪ್ರದರ್ಶಿಸಲಾದ ಪ್ರಾಚೀನ ವಸ್ತುಗಳ ಬಗ್ಗೆ ವಿವರಿಸಲು ತೆರೆಯುವ ಸಮಯದಲ್ಲಿ ಭೌತಿಕವಾಗಿ ಹಾಜರಿರಬೇಕು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023). ಕ್ಯೂರೇಟರುಗಳು ಒಂದಕ್ಕಿಂತ ಹೆಚ್ಚಿನ ವಸ್ತು ಸಂಗ್ರಹಾಲಯಗಳ ನೇತೃತ್ವವನ್ನು ವಹಿಸಿಕೊಂಡಿರುತ್ತಾರೆಯಾದ್ದರಿಂದ, ವಿವಿಧ ವಸ್ತು ಸಂಗ್ರಹಾಲಯಗಳ ಪ್ರಾರಂಭಿಕ ಗಂಟೆಗಳ ಅವಧಿಯಲ್ಲಿ ಕ್ಯೂರೇಟರುಗಳ ಉಪಸ್ಥಿತಿಯು ಕಾರ್ಯತ: ಸಾಧ್ಯವಿರುವುದಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

- ಅಥಣಿಯಲ್ಲಿನ ಸರ್ಕಾರಿ ವಸ್ತು ಸಂಗ್ರಹಾಲಯದ ಸಮೀಪ ವಿವಿಧ ವಸತಿ ಪ್ರದೇಶಗಳಿರುವವು ಹಾಗೂ ಅದು ಭೇಟಿ ನೀಡುವವರುಗಳಿಗೆ ನೇರ ಮತ್ತು ಸ್ವಚ್ಛ, ಆರೋಗ್ಯಕರ ಮಾರ್ಗದ ಕೊರತೆಯಿಂದ ಕೂಡಿರುತ್ತದೆ. ವಸ್ತು ಸಂಗ್ರಹಾಲಯದ ಬಾಹ್ಯ ಸೀಮೆಗಳು ಪುರ ಸಭೆಗೆ ಸೇರಿದ್ದು ರಸ್ತೆ ಸಂಪರ್ಕವನ್ನು, ಸ್ವಚ್ಛ ವಾತಾವರಣವನ್ನು ಒದಗಿಸುವಂತೆ ಅದನ್ನು ಕೋರಲಾಗಿದ್ದು ಅಂತಹ ಕೋರಿಕೆಯು ಯಾವುದೇ ಪ್ರತಿಫಲವನ್ನೂ ನೀಡಿರುವುದಿಲ್ಲ ಎಂದು ಸರ್ಕಾರವು ಉತ್ತರಿಸಿತು (ಸೆಪ್ಟೆಂಬರ್ 2022). ಛಾವಣಿಯ ಪ್ಲಾಸ್ಟರಿಂಗ್/ಗಾರೆಯು ಪ್ರದರ್ಶಿಸಲಾಗಿರುವಂತಹ ಪ್ರಾಚೀನ ಹಸ್ತಕೃತಿಗಳ ಮೇಲೆ ಬೀಳುತ್ತಿರುವುದರಿಂದ ವಸ್ತು ಸಂಗ್ರಹಲಯ ಕಟ್ಟಡವೂ ಕೂಡ ಶಿಥಿಲಾವಸ್ಥೆಯಲ್ಲಿದ್ದಿತು.




**ಛಾಯಾಚಿತ್ರ ಸಂಖ್ಯೆ 5.11: ಅಥಣಿಯಲ್ಲಿ ವಸ್ತು ಸಂಗ್ರಹಾಲಯಕ್ಕೆ ಸ್ವಚ್ಛ ಮತ್ತು ಸಮರ್ಪಕ ರಸ್ತೆ ಸಂಪರ್ಕ ಇಲ್ಲದಿರುವುದು.**




**ಛಾಯಾಚಿತ್ರ ಸಂಖ್ಯೆ 5.12: ಅಥಣಿಯಲ್ಲಿ ವಸ್ತು ಸಂಗ್ರಹಾಲಯದಲ್ಲಿ ಛಾವಣಿಯಿಂದ ಪ್ಲಾಸ್ಟರಿಂಗ್ ಗಾರೆ ಉದುರುತ್ತಿರುವುದು.**

- ಬೆಂಗಳೂರಿನ ಕಲಾ ಗ್ಯಾಲರಿಯು ಇರುವಂತಹ ಕಟ್ಟಡವು ವಿವಿಧ ಅಂತಸ್ತುಗಳನ್ನು ಹೊಂದಿರುತ್ತದೆ. ಆದಾಗ್ಯೂ, ಅನುವು ಮಾಡಲಾಗಿರುವಂತಹ ಲಿಫ್ಟ್ ಜಂಟಿ ಪರೀಕ್ಷಣೆಯ ವೇಳೆಯಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ.

- ಹಾಸನ, ಅಥಣಿ, ರಾಯಚೂರು, ಕಲಬುರಗಿ ಮತ್ತು ಮೈಸೂರು ವಸ್ತು ಸಂಗ್ರಹಾಲಯಗಳಲ್ಲಿ ಭೇಟಿ ನೀಡುವವರ ವಾಹನಗಳಿಗಾಗಿ ನಿಲುಗಡೆ ವ್ಯವಸ್ಥೆಯನ್ನು ಅನುವು ಮಾಡಿರಲಿಲ್ಲ.



**ಛಾಯಾಚಿತ್ರ ಸಂಖ್ಯೆ 5.13: ಕಲಬುರಗಿಯ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿರುವಂತಹ ಪ್ರಾಚೀನ ಹಸ್ತಕೃತಿಗಳ ಸಮೀಪದಲ್ಲಿಯೇ ವಾಹನಗಳನ್ನು ನಿಲ್ಲಿಸಿರುವುದು.**


- ಬೆಂಗಳೂರಿನ ಸರ್ಕಾರಿ ವಸ್ತು ಸಂಗ್ರಹಾಲಯವನ್ನು ಹೊರತುಪಡಿಸಿದಂತೆ, ಪ್ರವೇಶ ಶುಲ್ಕ, ಪ್ರವೇಶ ಸಮಯಗಳು, ರಜಾ ದಿನಗಳು, ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಎಲ್ಲಾ ವಸ್ತು ಸಂಗ್ರಹಾಲಯಗಳ ಪ್ರವೇಶ ದ್ವಾರದಲ್ಲಿ ಇಂದಿನದಿನದನ್ನಾಗಿ ಮಾಡಿರಲಿಲ್ಲ ಅಥವಾ ಸಮರ್ಪಕವಾಗಿ ಪ್ರದರ್ಶಿಸಿರಲಿಲ್ಲ

- ರಾಯಚೂರಿನಲ್ಲಿ ನವರಂಗ್ ದರ್ವಾಝಾ ಕೋಟೆಯಲ್ಲಿ ಇರುವಂತಹ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಕಸವನ್ನು ವಸ್ತು ಸಂಗ್ರಹಾಲಯದ ಪ್ರವೇಶ ದ್ವಾರದಲ್ಲಿ ಸುರಿಯಲಾಗಿದ್ದಿತು

ಹಾಗೂ ಕೋಟೆಯ ಗೋಡೆಗಳಲ್ಲಿ ಗಿಡಗಂಟೆಗಳು ಬೆಳೆದಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಲಬುರಗಿಯಲ್ಲಿನ ವಸ್ತು ಸಂಗ್ರಹಾಲಯವು ಸಸ್ಯ ತೋಟವನ್ನು ನಿರ್ವಹಿಸಿರಲಿಲ್ಲ ಹಾಗೂ ಅದರ ಪ್ರಾಂಗಣವು ಸ್ವಚ್ಛತೆಯಿಂದ ಕೂಡಿರಲಿಲ್ಲ.





**ಛಾಯಾಚಿತ್ರ ಸಂಖ್ಯೆ 5.14 : ಬೆಂಗಳೂರಿನ ಕಲಾ ಗ್ಯಾಲರಿಯು ಇರುವಂತಹ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದು/ದುಸ್ಥಿತಿಯಲ್ಲಿರುವುದು.**




**ಛಾಯಾಚಿತ್ರ ಸಂಖ್ಯೆ 5.15 ರಾಯಚೂರಿನ ಸರ್ಕಾರಿ ವಸ್ತು ಸಂಗ್ರಹಾಲಯದ ಪ್ರವೇಶ ದ್ವಾರದಲ್ಲಿ ಕಸವನ್ನು ಸುರಿದಿರುವುದು**





**ಛಾಯಾಚಿತ್ರ ಸಂಖ್ಯೆ 5.16: ರಾಯಚೂರಿನಲ್ಲಿ ವಸ್ತುಸಂಗ್ರಹಾಲಯವನ್ನು ಹೊಂದರುವ ಕೋಟೆಯಲ್ಲಿ ಗಿಡಗಂಟೆಗಳು ಬೆಳೆದಿರುವುದು.**




**ಛಾಯಾಚಿತ್ರ ಸಂಖ್ಯೆ 5.17: ಕಲಬುರಗಿಯ ಸರ್ಕಾರಿ ವಸ್ತು ಸಂಗ್ರಹಾಲಯದ ಮುಂಬಾಗದಲ್ಲಿ ನಿಕೃಷ್ಟಮಟ್ಟದಲ್ಲಿ ನಿರ್ವಹಿಸಲಾಗಿರುವ ಸಸ್ಯತೋಟ.**

- ಹಾಸನದಲ್ಲಿ ಹೊಸ ಕಟ್ಟಡದಲ್ಲಿ ಶೌಚಾಲಯಕ್ಕೆ ಮೆಟ್ಟಿಲುಗಳನ್ನು/ಪ್ಯಾಸೇಜನ್ನು ಅನುವು ಮಾಡಿರಲಿಲ್ಲವಾದ್ದರಿಂದ ಶೌಚಾಲಯದ ಒಂದು ಭಾಗಕ್ಕೆ ಸಮರ್ಪಕವಾದಂತಹ ಪ್ರವೇಶ ಅನುಕೂಲತೆ ಇರಲಿಲ್ಲ. ಕಲಬುರಗಿಯ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಸಿಬ್ಬಂದಿಗೆ ಹಾಗೂ ಅಲ್ಲದೆಯೇ ಭೇಟಿ ನೀಡುವವರಿಗೆ ಶೌಚಾಲಯ ಅನುಕೂಲತೆ ಇರಲಿಲ್ಲ.





**ಛಾಯಾಚಿತ್ರ ಸಂಖ್ಯೆ 5.18 : ಬೆಂಗಳೂರಿನ ವಸ್ತು ಸಂಗ್ರಹಾಲಯದಲ್ಲಿ ದುಸ್ಥಿತಿಯಲ್ಲಿರುವಂತಹ ಸಮೂಹ ಶೌಚಾಲಯ.**



**ಛಾಯಾಚಿತ್ರ ಸಂಖ್ಯೆ 5.19 : ಕಲಬುರಗಿಯಲ್ಲಿರುವ ವಸ್ತು ಸಂಗ್ರಹಾಲಯದಲ್ಲಿ ಶೌಚಾಲಯ ಅನುಕೂಲತೆಗಳ ದುಸ್ಥಿತಿ.**

- ಬೆಂಗಳೂರು ಮತ್ತು ಕಲಬುರಗಿಯಲ್ಲಿ ಸರ್ಕಾರಿ ವಸ್ತು ಸಂಗ್ರಹಾಲಯಗಳಲ್ಲಿ ಕರಪತ್ರಗಳು ಲಭ್ಯವಿದ್ದುದನ್ನು ಹೊರತುಪಡಿಸಿದಂತೆ, ಮಾರ್ಗಸೂಚಿಗಳನ್ನು ಅನುಸರಿಸುವ ಸಲುವಾಗಿ ಐದು ವಸ್ತು ಸಂಗ್ರಹಾಲಯಗಳಲ್ಲಿ ಭೇಟಿ ನೀಡುವವರುಗಳಿಗೆ ಯಾವುದೇ ಕೈಪಿಡಿ/ಶ್ರವಣ/ದೃಶ್ಯ ಮಾಧ್ಯಮ ಮಾರ್ಗದರ್ಶಿಗಳು ಮತ್ತು ಲೇಖನಗಳು, ಕರಪತ್ರಗಳು. ಕ್ಯಾಟಲಾಗುಗಳು, ಬಣ್ಣದ ಛಾಯಾಚಿತ್ರಗಳು, ಛಾಯಾಚಿತ್ರ ಸೂಚಿ ಕಾರ್ಡುಗಳು, ಗ್ಯಾಲರಿ ಶೀಟುಗಳು ಇತ್ಯಾದಿಗಳು ಲಭ್ಯವಿರಲಿಲ್ಲ.

- ಪ್ರದರ್ಶನಕ್ಕಾಗಿ ಇಡಲಾಗಿರುವಂತಹ ಪ್ರತಿಯೊಂದು ವಸ್ತುವಿಗೆ ಸಂಬಂಧಿಸಿದಂತೆ ಶೀರ್ಷಿಕೆಗಳು ಹಾಗೂ ವಸ್ತುಗಳ ಗುಂಪುಗಳಿಗೆ ಸಂಬಂಧಿಸಿದಂತೆ ಗ್ಯಾಲರಿ ವಿಷಯಗಳು ದ್ವಿಭಾಷೀಯ ನಮೂನೆಯಲ್ಲಿರತಕ್ಕದ್ದು. ವಸ್ತುವಿನ ಗುರುತಿಸುವಿಕೆ ಲೇಬಲ್ಲು ಪ್ರಾಚೀನ ಕಲಾಕೃತಿಗಳ ಬಗ್ಗೆ ಅತ್ಯಂತ ಮೂಲ ಮಾಹಿತಿಯನ್ನು, ಸಾಮಾನ್ಯವಾಗಿ ಹೆಸರು, ಕಾಲ, ಮೂಲ ಸ್ಥಳ, ಇತ್ಯಾದಿಗಳನ್ನು ಒದಗಿಸುತ್ತವೆ. ಭೇಟಿ ನೀಡುವವರು ಕಲಾಕೃತಿಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಸಹಾಯಕವಾಗುವಂತೆ ಸಾಮಾನ್ಯವಾಗಿ ವಿವರಣೆಯನ್ನು ಓದುವರು. ಜಂಟಿ ಪರೀಕ್ಷಣೆಯ ವೇಳೆಯಲ್ಲಿ, ವಸ್ತು ಸಂಗ್ರಹಾಲಯಗಳಲ್ಲಿ ಪ್ರದರ್ಶಿಸಲಾಗಿದ್ದಂತಹ ಬಹಳಷ್ಟು ಸಂಖ್ಯೆಯ ಪ್ರಾಚೀನ ಹಸ್ತಕೃತಿಗಳಿಗೆ ಗುರುತಿಸುವಿಕೆ ಶೀರ್ಷಿಕೆಗಳು / ಲೇಬಲ್ಲುಗಳನ್ನು ನೀಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಂತಹ ಮೂಲ ಅಗತ್ಯತೆಗಳ ಅನುಪಸ್ಥಿತಿಯು ಭೇಟಿ ನೀಡುವವರ ಅನುಭವವನ್ನು ಉತ್ತಮಗೊಳಿಸುವುದ ಮೇಲೆ ಒತ್ತು ನೀಡುವಲ್ಲಿನ ಕೊರತೆಯನ್ನು ಸೂಚಿಸುತ್ತಿದ್ದಿತು.




**ಛಾಯಾಚಿತ್ರ ಸಂಖ್ಯೆ 5.20: ಮೈಸೂರಿನ ಸರ್ಕಾರಿ ವಸ್ತು ಸಂಗ್ರಹಾಲಯದ ಹೊರಗೆ ಪ್ರದರ್ಶಿಸಲಾಗಿರುವಂತಹ ಪ್ರಾಚೀನ ಹಸ್ತಕೃತಿಗಳ ಮೇಲೆ ದ್ವಿಭಾಷೀಯ ಶೀರ್ಷಿಕೆ–ವಿವರಣೆಗಳ ಅನುಪಸ್ಥಿತಿ.**




**ಛಾಯಾಚಿತ್ರ ಸಂಖ್ಯೆ 5.21: ಕಲಬುರಗಿಯಲ್ಲಿನ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿರುವಂತಹ ಪ್ರಾಚೀನ ಹಸ್ತಕೃತಿಗಳ ಮೇಲೆ ದ್ವಿಭಾಷೀಯ ಶೀರ್ಷಿಕೆ–ವಿವರಣೆಗಳ ಅನುಪಸ್ಥಿತಿ.**

- ಭೇಟಿ ನೀಡುವವರಿಗೆ ಮನೋಗೋಚರತೆಯನ್ನು ಸಮೃದ್ಧಗೊಳಿಸುವುದನ್ನು ಹಾಗೂ ಪಾರಸ್ಪರಿಕ–ಕ್ರಿಯೆಯ ಅನುಭವವನ್ನು ಅಭಿವೃದ್ಧಿಗೊಳಿಸುವಲ್ಲಿ ಬೆಳಕು ಒಂದು ಗಮನಾರ್ಹ ಪಾತ್ರ ವಹಿಸುತ್ತದೆ. ಎಲ್ಲಾ ವಸ್ತು ಸಂಗ್ರಹಾಲಯಗಳಲ್ಲಿಯೂ (ಕಿತ್ತೂರಿನ ವಸ್ತು ಸಂಗ್ರಹಾಲಯವನ್ನು ಹೊರತುಪಡಿಸಿದಂತೆ) ಬೆಳಕಿನ ವ್ಯವಸ್ಥೆಗಳು ಪರಿಣಾಮಕಾರಿತ್ವದಿಂದ ಕೂಡಿರಲಿಲ್ಲ. ಕಲಾ ಗ್ಯಾಲರಿಯಲ್ಲಿ (ಬೆಂಗಳೂರಿನಲ್ಲಿ) ಕಟ್ಟಡ ಮತ್ತು ಉಪಕರಣ ಎರಡೂ ಸಹ ಸಭಾ ಭವನಕ್ಕಾಗಿಯೇ ಆಗಿದ್ದು, ಅವುಗಳು ದುಸ್ಥಿತಿ/ಜೀರ್ಣಾವಸ್ಥೆಯಲ್ಲಿದ್ದವು ಹಾಗೂ ಡೀಸೆಲು ಜನರೇಟರ್ ಸೆಟ್ಟು ಪರೀಕ್ಷಣೆಯ ವೇಳೆಯಲ್ಲಿ ಕಾರ್ಯನಿರ್ವಹಿಸುವ ಸ್ಥಿತಿಯಲ್ಲಿರಲಿಲ್ಲ.




**ಛಾಯಾಚಿತ್ರ ಸಂಖ್ಯೆ 5.22: ಕಲಬುರಗಿಯ ವಸ್ತು ಸಂಗ್ರಹಾಲಯದಲ್ಲಿ ಪ್ರಾಚೀನ ಹಸ್ತಕೃತಿಗಳನ್ನು ಪ್ರದರ್ಶಿಸುವ ಸಲುವಾಗಿ ನಿಕೃಷ್ಟಮಟ್ಟದ ಬೆಳಕಿನ ವ್ಯವಸ್ಥೆ.**

- ಕಲಬುರಗಿಯ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ವಸ್ತು ಸಂಗ್ರಹಾಲಯ ಕಟ್ಟಡದಲ್ಲಿ (ಗ್ಯಾಲರಿ – 3) ತಾರಸಿಯ ಛಾವಣಿಯ ಮೂಲಕ ಮಳೆ ನೀರು ಸೋರಿಕೆಯಾಗಿ ಪ್ರಾಚೀನ ಹಸ್ತಕೃತಿಗಳ ಮೇಲೆ ಬೀಳುತ್ತಿರುವುದನ್ನು ಗಮನಿಸಲಾಯಿತು.



**ಛಾಯಾಚಿತ್ರ ಸಂಖ್ಯೆ 5.23: ಕಲಬುರಗಿಯ ಸರ್ಕಾರಿ ವಸ್ತು ಸಂಗ್ರಹಾಲಯದಲ್ಲಿ ಮಳೆ ನೀರು ಸೋರಿಕೆಯಾಗಿ ಪ್ರಾಚೀನ ಹಸ್ತಕೃತಿಗಳ ಮೇಲೆ ಬೀಳುತ್ತಿರುವುದು.**

ಪ್ರಾಚೀನ ಹಸ್ತಕೃತಿಗಳನ್ನು ಆಧುನಿಕ ಪ್ರವೃತ್ತಿಗೆ ಸೂಕ್ತವಾಗುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿರುವಂತಹ ಸಮರ್ಪಕ ಪ್ಯಾನೆಲ್ಲು / ಪೋಡಿಯಂ ಮೇಲೆ ಪ್ರದರ್ಶಿಸಬೇಕು. ರಾಯಚೂರು, ಕಲಬುರಗಿ ಮತ್ತು ಮೈಸೂರಿನಲ್ಲಿನ ವಸ್ತು ಸಂಗ್ರಹಾಲಯಗಳಲ್ಲಿ ಅಂತಹ ಅನುವುಗಳನ್ನು ಮಾಡಿರಲಿಲ್ಲ. ಹಾಸನದಲ್ಲಿನ ವಸ್ತು ಸಂಗ್ರಹಾಲಯವು ಇರುವಂತಹ ಹೊಸ ಕಟ್ಟಡದಲ್ಲಿ ಸಮರ್ಪಕವಾದಂತಹ ಆಸರೆ ಅನುಕೂಲತೆಯು ಇರಲಿಲ್ಲ ಹಾಗೂ ಅನೇಕ ಸಂಖ್ಯೆಗಳಷ್ಟು ಪ್ರಾಚೀನ ಹಸ್ತಕೃತಿಗಳನ್ನು ಮುಕ್ತ ಪ್ರದೇಶದಲ್ಲಿ ಇರಿಸಲಾಗಿದ್ದಿತು (ಹಳೆಯ ಮರದ ರಥವೂ ಸೇರಿದಂತೆ) ಹಾಗೂ ಇವುಗಳು ಮಳೆ, ಬಿಸಿಲು ಮತ್ತು ದೂಳಿಗೆ ಮುಕ್ತವಾಗಿದ್ದವು.




**ಛಾಯಾಚಿತ್ರ ಸಂಖ್ಯೆ 5.24: ಹಾಸನದಲ್ಲಿ ವಸ್ತು ಸಂಗ್ರಹಾಲಯದ ಹೊಸ ಕಟ್ಟಡದಲ್ಲಿ ಪ್ರಾಚೀನ ಹಸ್ತಕೃತಿಗಳನ್ನು ಮುಕ್ತವಾಗಿ ಇರಿಸಿರುವುದು.**



**ಛಾಯಾಚಿತ್ರ ಸಂಖ್ಯೆ 5.25: ಹಾಸನದಲ್ಲಿ ವಸ್ತು ಸಂಗ್ರಹಾಲಯದ ಹೊಸ ಕಟ್ಟಡದಲ್ಲಿ ಹಳೆಯ ಮರದ ರಥವನ್ನು ಯಾವುದೇ ಆಸರೆ ಇಲ್ಲದೆಯೇ ಮುಕ್ತವಾಗಿ ಇರಿಸಿರುವುದು.**

ಶಿಲೆಯ ಪ್ರಾಚೀನ ಹಸ್ತಕೃತಿಗಳನ್ನು ವಸ್ತು ಸಂಗ್ರಾಹಾಲಯ ಪ್ರಾಂಗಣದ ಮುಕ್ತ ಪ್ರದೇಶದಲ್ಲಿ ಪ್ರದರ್ಶನಕ್ಕೆ ಇರಿಸುವುದು ಭೇಟಿ ನೀಡುವವರುಗಳನ್ನು ಆಕರ್ಷಿಸುತ್ತದೆಯಾದರೂ, ಪ್ರಾಚೀನ ಹಸ್ತಕೃತಿಗಳ ಪ್ರದರ್ಶನವನ್ನು ಸೂಕ್ತ ರೀತಿಯಲ್ಲಿ ಸರಿಪಡಿಸುವ ಸಲುವಾಗಿ ಕ್ರಿಯಾ ಯೋಜನೆಯಲ್ಲಿ ಅನುವನ್ನು ಮಾಡಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023). ಮುಂದುವರೆದು, ಹಾಸನದಲ್ಲಿನ ವಸ್ತು ಸಂಗ್ರಹಾಲಯದಲ್ಲಿ ಹಳೆಯ ಮರದ ರಥಕ್ಕೆ ಸಮರ್ಪಕ ಆಸರೆಯನ್ನು ಒದಗಿಸುವುದಾಗಿ ತಿಳಿಸಿತು.

- ಬೆಂಗಳೂರಿನ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಗೆ ಹೊಂದಿಕೊಂಡಂತೆ ಇರುವಂತಹ ಸಸ್ಯ ತೋಟ ಮತ್ತು ಕೊಳದಲ್ಲಿ ಕುರುಚಲು ಸಸ್ಯಗಳು ಬೆಳೆದು ಕೊಳಕು ಸಂಗ್ರಹವಾಗಿರುವುದರಿಂದ ಅದನ್ನು ನಿಕೃಷ್ಟಮಟ್ಟದಲ್ಲಿ ನಿರ್ವಹಿಸಲಾಗಿರುವುದು ಎಂಬುದನ್ನು ಗಮನಿಸಲಾಯಿತು.




**ಛಾಯಾಚಿತ್ರ ಸಂಖ್ಯೆ 5.26: ಬೆಂಗಳೂರಿನ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿಗೆ ಹೊಂದಿಕೊಂಡಂತೆ ಇರುವಂತಹ ಕೊಳದಲ್ಲಿ ಕುರುಚಲು ಸಸ್ಯಗಳು ಬೆಳೆದು ಕೊಳಕು ಸಂಗ್ರಹವಾಗಿರುವುದು.**

- ವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡಿರುವವರ / ಪ್ರವಾಸಿಗರುಗಳ ವಾರ್ಷಿಕ ಸಂಖ್ಯೆಯ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸುವ ಅಗತ್ಯತೆಯಿರುವುದು. ಮೈಸೂರಿನಲ್ಲಿರುವಂತಹ ಆಯುಕ್ತರವರ ಕಚೇರಿಗೆ ಮಾಸಿಕ ವರದಿಗಳನ್ನು ಕಳುಹಿಸುವುದನ್ನು ಹೊರತುಪಡಿಸಿದಂತೆ ವಾರ್ಷಿಕ ವರದಿಯನ್ನು ತಯಾರಿಸುವ ಹಾಗೂ ಅದನ್ನು ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸುವ ವ್ಯವಸ್ಥೆಯು ಇರಲಿಲ್ಲ.

- ವಸ್ತುಸಂಗ್ರಹಾಲಯಗಳು ಮತ್ತು ಕಲಾ ಗ್ಯಾಲರಿಗಳಲ್ಲಿ ಸಿಸಿಟಿವಿ ಅನುವು ಮಾಡಿರುವುದನ್ನು ಹೊರತುಪಡಿಸಿದಂತೆ, ಎಚ್ಚರಿಕೆ/ಅಲಾರಾಂ ವ್ಯವಸ್ಥೆ, ಮೆಟಲ್ ಡಿಟೆಕ್ಟರ್, ಮ್ಯಾಗ್ನೆಟಿಕ್ ಸ್ವಿಚ್‌ಗಳು, ಗ್ಲಾಸ್ ಬ್ರೇಕ್ ಡಿಟೆಕ್ಟರುಗಳು, ಕೈ ಚೀಲ ಎಕ್ಸ್–ರೇ ಯಂತ್ರಗಳು, ಇತ್ಯಾದಿಗಳು ಕಂಡು ಬರಲಿಲ್ಲ.

- ಬೆಂಕಿ ನಂದಿಸುವ ಸಾಧನಗಳು ಇದ್ದವಾದರೂ, ಇಲಾಖೆಯು ಬೆಂಕಿ ನಂದಿಸುವ ಸಾಧನಗಳ ಯಾವುದೇ ನಿಯತಕಾಲಿಕ ಪ್ರಾಯೋಗಿಕ ಪರೀಕ್ಷಣೆಗಳನ್ನು/ನಿರ್ವಹಣೆಯನ್ನು ಮಾಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯಲ್ಲಿ ಮಾದರಿ ಆಯ್ಕೆ ಮಾಡಲಾದ ವಸ್ತು ಸಂಗ್ರಹಾಲಯಗಳ ಜಂಟಿ ಪರೀಕ್ಷಣೆಯು ತೋರಿಸಿಕೊಟ್ಟಿತು.

- ಅಥಣಿ ಮತ್ತು ಮೈಸೂರಿನ ವಸ್ತು ಸಂಗ್ರಹಾಲಯಗಳಲ್ಲಿ ಮಾತ್ರ ಪ್ರಥಮ ಚಿಕಿತ್ಸಾ ಅನುಕೂಲತೆಗಳಿಗೆ ಅನುವು ಮಾಡಲಾಗಿದ್ದಿತು.


ಸಂದರ್ಶಕರ ಅನುಭವವನ್ನು ಹೆಚ್ಚಿಸಲು ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ವಸ್ತು ಸಂಗ್ರಹಾಲಯಗಳಿಗಾಗಿ ಮಾರ್ಗಸೂಚಿಗಳ ಅನುಸಾರ ವಸ್ತುಸಂಗ್ರಹಾಲಯಗಳ ನಿರ್ವಹಣೆಗೆ ಮಾರ್ಗಸೂಚಿಗಳನ್ನು ರೂಪಿಸಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023).

**ಶಿಫಾರಸು 19:**

**ಸರ್ಕಾರವು ವಸ್ತು ಸಂಗ್ರಹಾಲಯಗಳನ್ನು ಭಾರತೀಯ ಪುರಾತತ್ವ ಸಂಶೋಧನಾ ಸಂಸ್ಥೆಯ ವಸ್ತು ಸಂಗ್ರಹಾಲಯಗಳಿಗಾಗಿ ಮಾರ್ಗಸೂಚಿಗಳ ಅನುಸಾರ ನಿರ್ವಹಿಸುವ ಸಲುವಾಗಿ ಮಾರ್ಗಸೂಚಿಗಳನ್ನು ರೂಪಿಸತಕ್ಕದ್ದು ಹಾಗೂ ವಸ್ತು ಸಂಗ್ರಹಾಲಯಗಳಿಗೆ ಭೇಟಿ ನೀಡುವವರುಗಳ ಅನುಭವವನ್ನು ಹೆಚ್ಚಳಗೊಳಿಸುವ ಸಲುವಾಗಿ ಮೂಲ ಸೌಕರ್ಯಗಳನ್ನು ಖಚಿತಪಡಿಸಿಕೊಳ್ಳತಕ್ಕದ್ದು.**

***ದಾಖಲಾತಿ ರಿಜಿಸ್ಟರುಗಳ ಅಸಮರ್ಪಕ ನಿರ್ವಹಣೆ***

**5.8.2** ಪ್ರತಿಯೊಂದು ಪ್ರಾಚೀನಾವಶೇಷವೂ ಮತ್ತು ಪ್ರಾಚೀನ ಹಸ್ತಕೃತಿಯೂ ಒಂದು ಪ್ರತ್ಯೇಕ ದಾಖಲಾತಿ (ಅಸೆಷನ್) ಸಂಖ್ಯೆಯನ್ನು ಹೊಂದಿದ್ದವು ಹಾಗೂ ಅವು ದಾಖಲಾದ ವರ್ಷವನ್ನೂ ಸಹ ಸೂಚಿಸುತ್ತಿದ್ದವು. ಸಮರ್ಪಕವಾದಂತಹ ಹಾಗೂ ನಿಯತವಾದಂತಹ ದಾಖಲಾತಿ ರಿಜಿಸ್ಟರಿನ ನಿರ್ವಹಣೆಯು ವಸ್ತು ಸಂಗ್ರಹಾಲಯದ ವಸ್ತುಗಳ ರಕ್ಷಣೆ ಮತ್ತು ಸುರಕ್ಷತೆಗಾಗಿ ಅತ್ಯಗತ್ಯವಾಗಿರುವುದು. ವಸ್ತು ಸಂಗ್ರಹಾಲಯಗಳ ಜಂಟಿ ಪರೀಕ್ಷಣೆಯ ವೇಳೆಯಲ್ಲಿ ದಾಖಲೆಗಳನ್ನು ಪರಿಶೀಲಿಸಲಾಗಿ, ಪ್ರವರ್ಗವಾರು ರಿಜಿಸ್ಟರಿನ ಬದಲಾಗಿ ಒಂದು ಸಾಮಾನ್ಯ ದಾಖಲಾತಿ ರಿಜಿಸ್ಟರಿನ ನಿರ್ವಹಣೆ, ಭೌತಿಕ ಪರಿಶೀಲನಾ ತ:ಖ್ತೆಯನ್ನು ನಿರ್ವಹಿಸದಿರುವುದು, ತಪ್ಪು ನಮೂದುಗಳನ್ನು ಗಮನಿಸಿದಂದು ಅವುಗಳಿಗೆ ಸಂಬಂಧಿಸಿದಂತೆ ಸೂಕ್ತ ಮಾರ್ಪಾಡುಗಳನ್ನು ಮಾಡದಿರುವುದು, ಇವೇ ಮುಂತಾದ ಲೋಪದೋಷಗಳನ್ನು ಲೆಕ್ಕಪರಿಶೋಧನೆಯು ಗಮನಿಸಿತು (*ಅನುಬಂಧ 14ರಲ್ಲಿ* ವಿವರಿಸಲಾಗಿರುವುದು).



**ಛಾಯಾಚಿತ್ರ ಸಂಖ್ಯೆ 5.27: ರಾಯಚೂರಿನಲ್ಲಿನ ವಸ್ತು ಸಂಗ್ರಹಾಲಯದಲ್ಲಿ ನಿರ್ವಹಿಸಲಾಗಿರುವಂತಹ ದಾಖಲಾತಿ ರಿಜಿಸ್ಟರು.**

ಪ್ರವರ್ಗವಾರು ದಾಖಲಾತಿ ರಿಜಿಸ್ಟರನ್ನು ನಿರ್ವಹಿಸುವಂತೆ ವಸ್ತು ಸಂಗ್ರಹಾಲಯಗಳ ನೇತೃತ್ವ ವಹಿಸಿರುವಂತಹ ಅಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಲಾಗಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023). ಆದಾಗ್ಯೂ, ಪ್ರಾಚೀನ ಹಸ್ತಕೃತಿಗಳು ಮತ್ತು ಪ್ರಾಚೀನಾವಶೇಷಗಳ ನಿಯತಕಾಲಿಕ ಪರೀಕ್ಷಣೆಯನ್ನು ನಡೆಸುವ ಬಗ್ಗೆ ಉತ್ತರವು ಮೌನ ವಾಗಿದ್ದಿತು.

ಈ ರೀತಿಯಾಗಿ ದಾಖಲಾತಿ ರಿಜಿಸ್ಟರಿನ ಅಸಮರ್ಪಕ ನಿರ್ವಹಣೆ ಹಾಗೂ ವಸ್ತು ಸಂಗ್ರಹಲಯಗಳ ನಿಯತಕಾಲಿಕ ಪರೀಕ್ಷಣೆಗಳನ್ನು ನಡೆಸದಿರುವುದು ಪ್ರಸಕ್ತ ಇರುವಂತಹ ಪ್ರಾಚೀನ ಹಸ್ತಕೃತಿಗಳ ರಕ್ಷಣೆ ಮತ್ತು ಸುರಕ್ಷತೆಯೊಂದಿಗೆ ವ್ಯವಸ್ಥೆಯು ರಾಜಿ ಮಾಡಿಕೊಳ್ಳಬಹುದು.

**ಶಿಫಾರಸು 20:**

**ದಾಖಲಾತಿ ರಿಜಿಸ್ಟರಿನ ಒಂದು ಸಮಾನ ನಮೂನೆಯನ್ನು ರೂಪಿಸುವ ಸಲುವಾಗಿ ಹಾಗೂ ಪ್ರಾಚೀನ ಹಸ್ತಕೃತಿಗಳು ಮತ್ತು ಪ್ರಾಚೀನಾವಶೇಷಗಳ ನಿಯತಕಾಲಿಕ ಪರೀಕ್ಷಣೆಗಳನ್ನು ನಡೆಸುವ ಸಲುವಾಗಿ ಒಂದು ವ್ಯವಸ್ಥೆಯನ್ನು ರೂಪಿಸುವ ಕ್ರಮವನ್ನು ಕೈಗೊಳ್ಳತಕ್ಕದ್ದು.**

***ನಿಧಿನಿಕ್ಷೇಪದ (ಟ್ರೆಷರ್ ಟ್ರೋವ್) ಮೌಲ್ಯಮಾಪನ ಮತ್ತು ಭೌತಿಕ ಪರಿಶೀಲನೆಯನ್ನು ನಡೆಸುವಲ್ಲಿನ ವಿಫಲತೆ***

**5.8.3** ಕರ್ನಾಟಕ ನಿಧಿನಿಕ್ಷೇಪ ಅಧಿನಿಯಮ, 1962 ಸರ್ಕಾರದ ಪರವಾಗಿ ನಿಧಿಯನ್ನು (ಆ ರೀತಿ ಕಂಡುಬಂದಂತಹ ನಿಧಿಯ ಮೊತ್ತ ಅಥವಾ ಮೌಲ್ಯವು ರೂಪಾಯಿಗಳು ಒಂದು ಲಕ್ಷವನ್ನು ಮೀರಿರುವುದಾಗಿ ಕಂಡುಬಂದಲ್ಲಿ) ಸ್ವಾಧೀನಪಡಿಸಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ನೀಡಿರುವುದು. ಇಲಾಖೆಯು ತನ್ನ ಸ್ವಾಧೀನದಲ್ಲಿ ಬೃಹತ್ ಸಂಖ್ಯೆಯ ಪ್ರಾಚೀನ ಅತ್ಯಮೂಲ್ಯ ನಿಧಿನಿಕ್ಷೇಪಗಳನ್ನು ಹೊಂದಿರುವುದು, 369 ನಮೂದುಗಳನ್ನು ದಿನ ಪುಸ್ತಕದಲ್ಲಿ ಮಾಡಲಾಗಿರುವುದು. ಪ್ರತಿಯೊಂದು ನಮೂದಿನಲ್ಲಿಯೂ ಸ್ವೀಕರಿಸಲಾಗಿರುವಂತಹ ವಸ್ತುಗಳ ವಿವರಗಳು ದಾಖಲಾಗಿರುವುದು. ಇವುಗಳ ಪೈಕಿ ಚಿನ್ನ, ಬೆಳ್ಳಿ ತಾಮ್ರ, ಕಂಚು, ಹಿತ್ತಾಳೆ, ಮುಂತಾದ ಲೋಹಗಳ ವಿವಿಧ ವಸ್ತುಗಳು ಇದ್ದು ಮೈಸೂರು ಅರಮನೆಯ ಸುಭದ್ರ ಕೊಠಡಿಯಲ್ಲಿ ಅಥವಾ ಆಯುಕ್ತರ ಕಚೇರಿಯ ಭದ್ರತಾ ತಿಜೋರಿ/ಕೋಶದಲ್ಲಿ ಸಂರಕ್ಷಿಸಿಡಲಾಗಿರುವುದು.

ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು :

369 ಸ್ವೀಕೃತಿಗಳನ್ನು ದಿನ ಪುಸ್ತಕದಲ್ಲಿ 1952–53ರಿಂದ ದಾಖಲಿಸಲಾಗಿದ್ದು ಈ ನಮೂದುಗಳನ್ನು ಡಿಜಿಟಲೀಕರಣಗೊಳಿಸುವ ಸಲುವಾಗಿ ಈವರೆವಿಗೂ ಯಾವುದೇ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ. ನಿಕೃಷ್ಟಮಟ್ಟದಲ್ಲಿ ಸಂರಕ್ಷಿಸಲಾಗಿದ್ದಂತಹ ಮೊದಲ ಸಂಪುಟವು ಹರಿದು ಹೋಗಿದ್ದಿತು.

- ಕೇವಲ ಸ್ವೀಕರಿಸಲಾಗಿರುವ ದಿನಾಂಕ, ಸ್ವೀಕೃತಿಯ ಮೂಲ ಹಾಗೂ ಸ್ವೀಕರಿಸಲಾಗಿರುವಂತಹ ಗುಪ್ತ ನಿಧಿ ಅಥವಾ ನಿಧಿನಿಕ್ಷೇಪದ ಪರಿಮಾಣಕ ವಿವರಗಳನ್ನು ಮಾತ್ರ ದಾಖಲಿಸಲಾಗಿದ್ದಿತು. ಈ ವಸ್ತುಗಳನ್ನು ವರ್ಗೀಕರಿಸಿರಲಿಲ್ಲ (ವಿಗ್ರಹಗಳು, ನಾಣ್ಯಗಳು, ಚಿನ್ನ, ಬೆಳ್ಳಿ ಮುಂತಾದ ವಸ್ತುಗಳು, ಇತ್ಯಾದಿಯಾಗಿ) ಹಾಗೂ ವಿವಿಧ ವರ್ಗಗಳ ವಸ್ತುಗಳ ಒಟ್ಟು ಸಂಖ್ಯೆಯನ್ನು ಖಚಿತಪಡಿಸಿಕೊಂಡಿರಲಿಲ್ಲ. ಇಲಾಖೆಯು ವಸ್ತುಗಳ ಸ್ವೀಕೃತಿಯ ಸಮಯದಲ್ಲಿ ಅಧಿನಿಯಮದ ಪರಿಚ್ಛೇದ 4ರ ಅಡಿಯಲ್ಲಿ ಅಗತ್ಯವಿರುವಂತೆ ಅಂದಾಜು ಮೌಲ್ಯವನ್ನು ಒಳಗೊಂಡಂತಹ ವರದಿಯನ್ನು ಪಡೆದುಕೊಳ್ಳುವಲ್ಲಿ ಹಾಗೂ ಗುಪ್ತ ನಿಧಿ ಅಥವಾ ನಿಧಿನಿಕ್ಷೇಪದ ಅಂದಾಜು ಮೌಲ್ಯವನ್ನು ನಿರ್ಧಾರಣೆ ಮಾಡುವ ಸಲುವಾಗಿ ಮೌಲ್ಯಮಾಪನವನ್ನು ಕೈಗೊಳ್ಳುವಲ್ಲಿ ವಿಫಲಗೊಂಡಿದ್ದಿತು.

- ಸರ್ಕಾರದ ಭರವಸೆಯ (ಡಿಸೆಂಬರ್ 2011) ಆಧಾರದ ಮೇರೆಗೆ ಜುಲೈ 2014ರಲ್ಲಿ ಒಂದು ಭೌತಿಕ ಪರಿಶೀಲನೆಯನ್ನು ನಡೆಸಲಾಯಿತು ಹಾಗೂ ಆ ದಿನಾಂಕದವರೆವಿಗೆ 362 ನಮೂದುಗಳ ಅನುಸಾರ ಎಲ್ಲಾ ಐಟಂಗಳು ಒಂದು ಉತ್ತಮ ಸ್ಥಿತಿಯಲ್ಲಿ ಲಭ್ಯವಿರುವುದಾಗಿ ಕಂಡು ಬಂದಿದ್ದಿತು. ಗುಪ್ತ ನಿಧಿ ಅಥವಾ ನಿಧಿನಿಕ್ಷೇಪದ ವಸ್ತುಗಳ ನಿಯತಕಾಲಿಕ ಭೌತಿಕ ಪರೀಕ್ಷಣೆಗಾಗಿ ತದನಂತರದಲ್ಲಿ ಯಾವುದೇ ನಿರ್ದಿಷ್ಟ ಮಾರ್ಗಸೂಚಿಗಳನ್ನು ರೂಪಿಸಿರಲಿಲ್ಲ/ನೀಡಿರಲಿಲ್ಲ. ಅಲ್ಲಿಂದ ಮುಂದಕ್ಕೆ ಯಾವುದೇ ಭೌತಿಕ ಪರೀಕ್ಷಣೆಯನ್ನು ನಡೆಸಿರುವುದಿಲ್ಲ.

- ಕ್ರಮ ಸಂಖ್ಯೆ 363ರಿಂದ 369ರವರೆಗಿನ ಕ್ರಮ ಸಂಖ್ಯೆಯಲ್ಲಿ ಸ್ವೀಕರಿಸಲಾಗಿರುವಂತಹ ಹಾಗೂ ದಾಖಲಿಸಲಾಗಿರುವಂತಹ ಗುಪ್ತ ನಿಧಿ ಅಥವಾ ನಿಧಿನಿಕ್ಷೇಪಗಳನ್ನು ಮೈಸೂರು ಅರಮನೆಯ ಸುಭದ್ರ ಕೊಠಡಿಗೆ ವರ್ಗಾಯಿಸುವ ಬದಲಾಗಿ ಇಲಾಖೆಯ ಭದ್ರತಾ ತಿಜೋರಿ/ಕೋಶದಲ್ಲಿ ಇರಿಸಲಾಗಿರುವುದು.

- ನ್ಯಾಯಾಲಯದ ಆದೇಶಗಳ ಅನುಸಾರ ಡಿಸೆಂಬರ್ 2016ರಲ್ಲಿ ಪೊಲೀಸ್ ಅಧಿಕಾರಿಗಳಿಂದ ಸ್ವೀಕರಿಸಲಾಗಿದ್ದಂತಹ ಬೆಳ್ಳಿ ನಾಣ್ಯಗಳನ್ನು (ದಿನ ಪುಸ್ತಕದ ಕ್ರಮ ಸಂಖ್ಯೆ 366) ಮೈಸೂರು ಅರಮನೆಯ ಸುಭದ್ರ ಕೊಠಡಿಗೆ ವರ್ಗಾಯಿಸುವಲ್ಲಿ 10 ತಿಂಗಳ ವಿಳಂಬವಾಗಿದ್ದಿತು, ಅವುಗಳನ್ನು ಕೇವಲ ಅಕ್ಟೋಬರ್ 2017ರಲ್ಲಿ ವರ್ಗಾಯಿಸಲಾಗಿದ್ದಿತು.

ಈ ರೀತಿಯಾಗಿ, ಇಲಾಖೆಯು ತನ್ನಲ್ಲಿ ಹೊಂದಿದ್ದಂತಹ ಗುಪ್ತ ನಿಧಿ ಅಥವಾ ನಿಧಿನಿಕ್ಷೇಪಗಳನ್ನು ಮೌಲ್ಯಮಾಪನ ಮಾಡುವ ಸಲುವಾಗಿ ಒಂದು ಸಮರ್ಪಕ ಕಾರ್ಯವಿಧಾನವನ್ನು ಹೊಂದಿರಲಿಲ್ಲ ಹಾಗೂ ತನ್ನ ಸುಪರ್ದಿನಲ್ಲಿ/ಸ್ವಾಧೀನದಲ್ಲಿ ಇದ್ದಂತಹ ವಸ್ತುಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವ ಸಲುವಾಗಿ ಯಾವುದೇ ವ್ಯವಸ್ಥೆ ಇರಲಿಲ್ಲ.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶವನ್ನು ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಗಮನಕ್ಕೆ ತೆಗೆದುಕೊಳ್ಳಲಾಗಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಆಗಸ್ಟ್ 2023).

**ಶಿಫಾರಸು 21:**

**ಇಲಾಖೆಯು, ಸರ್ಕಾರದೊಂದಿಗೆ ಸಮಾಲೋಚಿಸಿ ಗುಪ್ತ ನಿಧಿ ನಿಧಿನಿಕ್ಷೇಪಗಳ ಭೌತಿಕ ಪರಿಶೀಲನೆಗಾಗಿ ನಿಯತಕಾಲಿಕತೆಯನ್ನು ತೀರ್ಮಾನಿಸತಕ್ಕದ್ದು ಹಾಗೂ ಅದನ್ನು ಒಂದು ನಿಯತ ಅಂತರಗಳಲ್ಲಿ ಕೈಗೊಳ್ಳತಕ್ಕದ್ದು.**

**ಬೆಂಗಳೂರು** (ವಿಮಲೇಂದ್ರ ಎ. ಪಟವರ್ಧನ್)
**ದಿನಾಂಕ** **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)**
**ಕರ್ನಾಟಕ**

**ಮೇಲು ರುಜು ಮಾಡಲಾಗಿದೆ**

**ನವದೆಹಲಿ** (ಗಿರೀಶ್ ಚಂದ್ರ ಮುರ್ಮು)
**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**